ಅಧ್ಯಕ್ಷರು:- ಇದು ಇಲ್ಲಿಗೆ ಮುಗಿಯಿತು. ಈಗ ಮಾನ್ಯ ಶ್ರೀ ಶ್ರೀಕಂಠಯ್ಯನರಿಂದ 'ಬರದ' ವಿಷಯದ ಬಗ್ಗೆ ಉತ್ತರ.

(ಉ) ರಾಜ್ಯದಲ್ಲಿ ಬರ ಪರಿಹಾರದ ಬಗ್ಗೆ ಮಾನ್ಯ ಕಂದಾಯ ಸಚಿವರಿಂದ ಉತ್ತರ

ಶ್ರೀ ಹೆಚ್.ಸಿ ಶ್ರೀಕಂಠಯ್ಯ(ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, ಬರ ಬರತಕ್ಕಂಥದ್ದನ್ನು ಊಹೆ ಮಾಡಿಕೊಂಡು ಅದಕ್ಕೆ ಮುಂಜಾಗ್ರತೆ ಕ್ರಮ ಏನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಶ್ರೀ ಭೈರೇಗೌಡರು ನಿನ್ನೆಯ ದಿವಸ ಭಾಷಣ ಮಾಡಿದ್ದಾರೆ. ಈಗಾಗಲೇ ಎರಡು ಸಲ ಬರಗಾಲ ಬಂದಿದ್ದನ್ನು ನಾವು ನಿಭಾಯಿಸಿದ್ದೇವೆ. ಬಹಳ ಸಕ್ಸಸ್‌ಫುಲ್ ಆಗಿ ನಾವು ನಿಭಾಯಿಸಿದ್ದೇವೆ ಇದು ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಗೊತ್ತಿದೆ. ಅವರ ಊರಿಗೆ ಕುಡಿಯುವ ನೀರಿನ ಸರಬರಾಜನ್ನು ಎಷ್ಟು, ಹೇಗೆ ಅದನ್ನು ಮಾಡಿದ್ದೇವೆನ್ನುವುದು ಅವರಿಗೆ ಪೂರ್ಣವಾಗಿ ಅರಿವಿದೆ. ವಿಧಾನ ಪರಿಷತ್ತಿನಲ್ಲಿ 'ಬರ' ವಿಷಯದ ಮೇಲಿನ ಚರ್ಚೆ ಸಮಯದಲ್ಲಿ ಶ್ರೀ ಎಂ.ಸಿ. ನಾಣಯ್ಯನವರು ಮಾತನಾಡುತ್ತಾ ಒಂದು ಸಲಹೆಯನ್ನು ಕೊಟ್ಟರು. ಅದೇನೆಂದರೆ- 'ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ವಿರೋಧ ಪಕ್ಷದ ನಾಯಕರು ಹಾಗೂ ಕೆಲವು ಮುಖಂಡರು ಒಳಗೊಂಡಂತೆ ಈ ಒಂದು ಬರಗಾಲ ಪರಿಸ್ಥಿತಿ ಹಾಗೂ ಇತರೆ ಸಮಸ್ಯೆಗಳನ್ನು ಪರಿಹಾರ ಮಾಡತಕ್ಕಂಥದ್ದಕ್ಕೆ ಒಂದು ಮಾನಿಟರಿಂಗ್ ಕಮಿಟಿಯನ್ನು ನೇಮಿಸಬೇಕು, ಇದರಿಂದ ಬಹಳ ಅನುಕೂಲವಾಗುತ್ತದೆ. ಆ ಕಮಿಟಿಯಲ್ಲಿ ಇಂಥ ಪರಿಸ್ಥಿತಿಯನ್ನು ಸುಧಾರಣೆ ಮಾಡಿಕೊಳ್ಳುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎನ್ನತಕ್ಕಂಥದ್ದನ್ನು ತೀರ್ಮಾನ ಮಾಡಬಹುದೆಂಬ ಸಲಹೆಯನ್ನು ಕೊಟ್ಟಾಗ, ಖಂಡಿತವಾಗಿಯೂ ಇದು ಉತ್ತಮವಾದ ಸಲಹೆ ಅದಕ್ಕೆ ನನ್ನ ಒಪ್ಪಿಗೆ ಇದೆ ಎನ್ನತಂಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದನ್ನು ನಾನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಈ ರೀತಿಯ ಕಮಿಟಿ ಅದು ಸಾಧ್ಯವೋ ಅಲ್ಲವೋ ಎಂದು ನೀವು ಯೋಚನೆ ಮಾಡಬೇಕು. ಬರ ಬರುವುದಕ್ಕೆ ಮುಂಚೆ ಏನು ಮುಂಜಾಗ್ರತೆಯ ಕ್ರಮ ತೆಗೆದುಕೊಳ್ಳಬೇಕೆಂದು ಬಹಳ ಉತ್ತಮವಾದ ಸಲಹೆಗಳನ್ನು ಶ್ರೀ ಭೈರೇಗೌಡರು, ಶ್ರೀ ಸಿಂಧ್ಯಾರವರು ಶ್ರೀ ಜಗದೀಶ್ ಶೆಟ್ಟರ್‌ರವರು, ಶ್ರೀ ಸೋಮಶೇವರ್‌ರವರು ಇನ್ನೂ ನನ್ನ ಅನೇಕ ಸ್ನೇಹಿತರು ತಿಳಿಸಿದ್ದಾರೆ. ನಾನು ಹೇಳಿದ ಹಾಗೆ ಈಗಾಗಲೇ ಎರಡು ಬರಗಾಲ ಪರಿಸ್ಥಿತಿಯನ್ನು ಎದುರಿಸಿದ್ದೇವೆ. ಆದ್ದರಿಂದ ಅನುಭವಕ್ಕೇನೂ ಕಡಿಮೆ ಇಲ್ಲ. ನಮ್ಮ ಅಧಿಕಾರಿಗಳಿಗೂ ಸಹ ಇಂಥ ಪರಿಸ್ಥಿತಿಯನ್ನು ನಿಭಾಯಿಸತಕ್ಕಂಥದ್ದು, ಮಂತ್ರಿಗಳಿಗೆ, ಸಂಬಂಧಪಟ್ಟಂಥವರಿಗೂ ಸಹ ಎಲ್ಲವೂ ಚೆನ್ನಾಗಿ ಅರಿವಾಗಿದೆ. ಬರಗಾಲ ಬರಬಾರದು ಎನ್ನುವುದು ನಮ್ಮ ಆಸೆ. ಒಂದು ಪಕ್ಷ ಬಂದರೂ ಸಹ ಯಾವರೀತಿಯಾಗಿ ನಾವು ಅದನ್ನು ನಿಭಾಯಿಸಬೇಕೆನ್ನತಕ್ಕಂಥದ್ದಕ್ಕೆ ಈಗಾಗಲೇ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

5.10 ಪಿಎಂ

ಅದಕ್ಕೆ ಎಲ್ಲಾ ವ್ಯವಸ್ಥೆಯನ್ನು ಸಹ ಮಾಡುವುದಕ್ಕೆ ನಾವು ಏರ್ಪಾಡು ಮಾಡುತ್ತಿದ್ದೇವೆ. ಹಿಂದೆ ಬರಗಾಲ ಬಂದಾಗ ಅದಕ್ಕೆ ಸಾಕಷ್ಟು ಹಣವನ್ನು ರಾಜ್ಯಸರ್ಕಾರ ಖರ್ಚು ಮಾಡಿದೆ. ನಮ್ಮ ಸರ್ಕಾರಕ್ಕೆ ಬರಬೇಕಾದ ಪಾಲು ಕೇಂದ್ರದಿಂದ ಬಂತೇ ಹೊರತು ಅದಕ್ಕಿಂತ ಹೆಚ್ಚಿನ ಹಣ ಅಲ್ಲಿಂದ ದೊರೆಯಲಿಲ್ಲ. ಒಂದು ಲಕ್ಷ ಟನ್ 'ಕೂಲಿಗಾಗಿ ಕಾಳು' ಎನ್ನತಕ್ಕಂಥದ್ದನ್ನು ಪುಕ್ಕಟೆಯಾಗಿ ಕೊಟ್ಟರು. ಅದರಿಂದಲೂ ಸಹ ಬಹಳ ಅನುಕೂಲವಾಯಿತು.

ಶ್ರೀ ಪಿ.ಹೆಚ್. ಪೂಜಾರ್:- ಮಾನ್ಯ ಅಧ್ಯಕ್ಷರೆ, ಬಂದಂಥ ಆಹಾರವನ್ನು ಬಾಗಲಕೋಟೆಯಲ್ಲಿ ರಕ್ಷಣೆ ಮಾಡಲಿಕ್ಕೆ ಆಗಲಿಲ್ಲ. ನೂರಾರು ಚೀಲ ಅಕ್ಕಿ, ಗೋಧಿಯನ್ನು ಬೀದಿಗೆ ಎಸೆಯುತ್ತಿದ್ದಾರೆ. ಅದನ್ನು ಏಕೆ ಯೂಸ್ ಮಾಡಲಿಲ್ಲ?

ಅಧ್ಯಕ್ಷರು:- ಶ್ರೀ ಪೂಜಾರ್‌ರವರೆ, ಮಂತ್ರಿಗಳು ಉತ್ತರ ಕೊಡುವಾಗ ನೀವು ಏಕೆ ಮಧ್ಯದಲ್ಲಿ ಡಿಸ್ಟರ್ಬ್ ಮಾಡುತ್ತಿದ್ದೀರಿ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೆ, ವಿಷಯವನ್ನು ಸರಿಯಾಗಿ ಮಾನ್ಯ ಸದಸ್ಯರು ಅರಿತ್ತಿದ್ದಾರೋ ಇಲ್ಲವೋ, ಅದು ನನಗೆ ಗೊತ್ತಿಲ್ಲ. ಬಾಗಲಕೋಟೆಯಲ್ಲಿ ಆಹಾರ ಧಾನ್ಯಗಳನ್ನು ಎಸೆದಿದ್ದಾರೆಂದು ಹೇಳುತ್ತಿರುವುದು ಅದು ನಮ್ಮದಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಯವರ ಜೊತೆ, ನಮ್ಮ ಸೆಕ್ರೆಟರಿ, ಅಧಿಕಾರಿಗಳ ಜೊತೆ ಮಾತನಾಡಿ ಪರಿಶೀಲಿಸಿದಾಗ ನಮಗೆ ಸಂಬಂಧಿಸಿದ ದವಸ ಧಾನ್ಯಗಳು ಏನು ಬಂದಿತ್ತೋ ಅದು ಮಾರ್ಚ್ ತಿಂಗಳಿಗೆ ಪೂರ್ಣವಾಗಿ ಖರ್ಚಾಗಿದೆ.

ಶ್ರೀ ಪಿ.ಹೆಚ್. ಪೂಜಾರ್:- ಖರ್ಚಾಗಿರುವುದನ್ನು ನಾನು ಕೇಳುತ್ತಿಲ್ಲ. ಅಲ್ಲಿ ಇದ್ದ ಆಹಾರ ಧಾನ್ಯ ಬೀದಿಗೆ ಬಿದ್ದಿದೆ. ವೇರ್‌ಹೌಸ್ ತಮ್ಮದು.

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ:- ಬೀದಿಗೆ ಬಿದ್ದಿರುವುದು ನಮ್ಮದಲ್ಲಾರೀ ನಾನು ಹೇಳುತ್ತಿರುವುದು ನಿಮಗೆ ಸರಿಯಾಗಿ ಕೇಳುತ್ತಿಲ್ಲವೆಂದು ತೋರುತ್ತದೆ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ಜಿಲ್ಲೆಯಲ್ಲಿನ ಆಹಾರ ಧಾನ್ಯದ ಬಗ್ಗೆ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಈ ಬರಗಾಲಕ್ಕೆ ಕೊಟ್ಟಂಥ ಗೋಧಿ ಮತ್ತು ಅಕ್ಕಿ ಕಾಳಸಂಜೆಯಲ್ಲಿ ಮಾರಾಟ ಮಾಡುವುದಕ್ಕೆ ಹೋಗಿ ಅದು ಸೀಜ್ ಅದಂಥ ವಿಚಾರ ತಮಗೆ ಗೊತ್ತಿದೆ.

ಶ್ರೀ ಹೆಚ್.ಸಿ ಶ್ರೀ ಕಂಠಯ್ಯ:- ಮಾನ್ಯ ಅಧ್ಯಕ್ಷರೆ, ಬಾಗಲಕೋಟೆಯಲ್ಲಿ ಅಕ್ಕಿ ಬೀದಿಯಲ್ಲಿ ಚೆಲ್ಲಾಡಿದೆ ವಾಸನೆ ಬಂದಿದೆ ಎಂದು ರೇಡಿಯೋದಲ್ಲಿ ಪೇಪರ್‌ನಲ್ಲಿ ಮೊನ್ನೆ ಬಂತು. ಅದು ನಮ್ಮ ಪದಾರ್ಥ ಅಲ್ಲ. ಬಾಗಲಕೋಟೆಯಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಿಸಿದ ಸ್ಟಾಕ್ ಇಲ್ಲ. ಜಿಲ್ಲಾಧಿಕಾರಿಗಳಿಗೆ ಕೊಟ್ಟಂಥ ಎಲ್ಲಾ ದವಸ ಧಾನ್ಯಗಳು ಮಾರ್ಚ್ ತಿಂಗಳಿಗೆ ಖರ್ಚಾಗಿದೆ.

ಶ್ರೀ ಪಿ.ಹೆಚ್. ಪೂಜಾರ್:- ಅಲ್ಲಿಯ ಗೋಡಾನ್ ರಾಜ್ಯಸರ್ಕಾರದ್ದು ಅಲ್ಲವೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಗೋಡೌನ್ ಯಾರದೇ ಇರಬಹುದುರೀ, ಗೋಡೌನ್ ಇದ್ದರೆ ಮಾಲು ಯಾರುದ್ದು? ಅದು ನಮ್ಮದಲ್ಲ ಎಂದು ಹೇಳಿದ್ದೇವೆ.

ಶ್ರೀ ಉಮೇಶ್ ವಿ. ಕತ್ತಿ:- ಮಾನ್ಯ ಅಧ್ಯಕ್ಷರೆ, ಕಳ್ಳಮಾರಾಟ ಮಾಡುವುದಕ್ಕೆ ಅಕ್ಕಿ ಮತ್ತು ಗೋಧಿಯನ್ನು ತೆಗೆದುಕೊಂಡು ಹೋಗುವಂಥ ಎರಡು ಲಾರಿಯನ್ನು ಸೀಜ್ ಮಾಡಿದರು. ಅದು ಯಾವುದು? ಅದು ಬರಗಾಲಕ್ಕೆ ಕೊಟ್ಟಂಥ ಅಕ್ಕಿ ಅಲ್ಲವೇ?

ಅಧ್ಯಕ್ಷರು:- ಮಾನ್ಯ ಶ್ರೀ ಕಂಠಯ್ಯನವರೇ, ನೀವು ಮಧ್ಯೆ ಮಧ್ಯೆ ಅವರಿವರಿಗೆ ಉತ್ತರ ಕೊಡಬೇಡಿ. ನೀವು ಪೂರ್ತಿ ಉತ್ತರ ಹೇಳಿ ಮುಗಿಸಿದ ಮೇಲೆ ಅವರು ಕ್ಲಾರಿಫಿಕೇಶನ್ ಕೇಳಲಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :- ಮಾನ್ಯ ಕಾರ್ಯದರ್ಶಿಯವರಿಗೆ ಬಂದಿರುವ ಪತ್ರ ವ್ಯವಹಾರದ ಮಾಹಿತಿ ಪ್ರಕಾರ 3290. ಟನ್ ಅಕ್ಕಿ, 3030 ಟನ್ ಗೋಧಿ ಮಾರ್ಚ್ ತಿಂಗಳೂ 2002ರಲ್ಲಿಯೇ ಖರ್ಚಾಗಿರುತ್ತದೆ. ಈ ಯೋಜನೆಯಡಿ ಬಿಡುಗಡೆ ಮಾಡಿದ ಅಕ್ಕಿ ಹಾಗೂ ಗೋಧಿ ಶಿಲ್ಕು ಇರುವುದಿಲ್ಲ ಎನ್ನತಕ್ಕಂಥದ್ದು ಇದೆ. ಅದು ಯಾವ ವರ್ತಕರದು ಅಥವಾ ಇನ್ಯಾರದ್ದು ಎಂದು ನೀವೇ ಪರಿಶೀಲನೆ ಮಾಡಿ. ನಾನು ಪರಿಶೀಲನೆ ಮಾಡಿದ್ದು ಇಲ್ಲಿ ಹೇಳಿದ್ದೇನೆ.

(ಗೊಂದಲ)

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೆ, ಆದ್ದರಿಂದ ಎಲ್ಲಾ ಮಾನ್ಯ ಸದಸ್ಯರುಗಳು ಗಂಭೀರವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಹಿಂದೆ ಬರಗಾಲ ಬಂದಾಗ ಎಷ್ಟರಮಟ್ಟಿಗೆ ಆದನ್ನು ಎದುರಿಸಿದ್ದೇವೋ ಅದಕ್ಕಿಂತ ಚೆನ್ನಾಗಿ ನಿಮ್ಮೆಲ್ಲರ ಮನಸ್ಸಿಗೆ ಸಮಾಧಾನ ಆಗುವ ರೀತಿಯಲ್ಲಿ ಸರ್ಕಾರ ಖಂಡಿತವಾಗಿ ಕೆಲಸ ಮಾಡುತ್ತದೆ. ಬರಗಾಲ ಬಾರದಿರಲಿ ಎಂಬುದು ನಮ್ಮೆಲ್ಲರ ಹಾರೈಕೆ. ನಿಮ್ಮೆಲ್ಲರ ಸಹಕಾರದಿಂದ ಇನ್ನೂ ಚೆನ್ನಾಗಿ ಕೆಲಸ ಮಾಡುತ್ತೇವೆಂದು ಹೇಳಿ, ನಿಮಗೆಲ್ಲರಿಗೂ ದೇವರು ಒಳ್ಳೆಯದು ಮಾಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಇದೇ ರೀತಿ ಉತ್ತರ ಕೊಡುತ್ತಾರೆಂದು ನಮಗೆ ಗೊತ್ತಿತ್ತು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ನಮ್ಮ ಶ್ರೀ ಭೈರೇಗೌಡರು ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದರು. ಅದನ್ನೆಲ್ಲಾ ಚೆನ್ನಾಗಿ ತೆಗೆದುಕೊಂಡಿದ್ದೇವೆಂದು ನಾನು ಹೇಳಿದ್ದೇನೆ. ಇನ್ನು ಯಾವ ಉತ್ತರ ನಿಮಗೆ ಕೊಡಬೇಕು?

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಬಹಳ ಗಂಭೀರವಾದ ಉತ್ತರವನ್ನು ಕೊಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಒಂದು ಲಕ್ಷ ಟನ್ ಆಹಾರದ ಬಗ್ಗೆ ಹೇಳಿದರು. ಎರಡು ವರ್ಷಗಳಿಂದ ಬಹಳ ಉತ್ತಮವಾಗಿ ನಾವು ಬರಗಾಲ ಕಾಮಗಾರಿಯನ್ನು ಮಾಡಿದ್ದೇವೆ. ಎಲ್ಲಾ ರೀತಿಯಿಂದ ರೈತರನ್ನು ಬಹಳ ಸಂತೋಷವಾಗಿ ಇಟ್ಟಿದ್ದೇವೆಂದು ಹೇಳಿದರು. ಒಂದು ಲಕ್ಷ ಟನ್ ಆಹಾರ ಸಾಮಗ್ರಿಯನ್ನು ಕೇಂದ್ರ ಸರ್ಕಾರದವರು ಕೊಟ್ಟರು ಎಂದು ಹೇಳಿದರು. ಅದನ್ನು ರಾಜ್ಯಸರ್ಕಾರದಿಂದ ಸರಿಯಾಗಿ ಖರ್ಚು ಮಾಡಲಿಕ್ಕೆ ಆಗಲಿಲ್ಲ. ಅದನ್ನು ಖರ್ಚು ಮಾಡಿದ್ದರೆ ಕೇಂದ್ರ ಸರ್ಕಾರದಿಂದ ಅವರು ಇನ್ನೂ ಒಂದು ಲಕ್ಷ ಟನ್ ಹೆಚ್ಚು ಕೊಡುವವರಿದ್ದರು. ಆಂಧ್ರಪ್ರದೇಶದವರು 7 ಲಕ್ಷ ಟನ್ ಆಹಾರಧಾನ್ಯವನ್ನು ತೆಗೆದುಕೊಂಡರು. ಇದೇ ಸಂದರ್ಭದಲ್ಲಿ ನಮ್ಮ ರಾಜ್ಯಸರ್ಕಾರದವರು ಕೇಂದ್ರದಿಂದ ಹೆಚ್ಚಿಗೆ ಆಹಾರಧಾನ್ಯವನ್ನು ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. 'ಕೂಲಿಗಾಗಿ ಕಾಳು' ಯೋಜನೆಯಡಿ ಕೊಟ್ಟಂಥ ಅಕ್ಕಿಯನ್ನು ಇಲ್ಲಿನ ಅಧಿಕಾರಿಗಳಿಂದ ಖರ್ಚು ಮಾಡಲಿಕ್ಕೆ ಆಗಲಿಲ್ಲ. ಏಕೆಂದರೆ ಆ ಆಹಾರ ಸಾಮಾಗ್ರಿಗಳಿಗೆ ರಾಜ್ಯಸರ್ಕಾರದಿಂದ ಮ್ಯಾಚಿಂಗ್ ಗ್ರಾಂಟ್ ಕೊಡಬೇಕಾಗಿತ್ತು. ಅದನ್ನು ರಾಜ್ಯಸರ್ಕಾರದಿಂದ ಕೊಡಲಿಕ್ಕೆ ಆಗಲಿಲ್ಲ. ಹೀಗಾಗಿ ಮಾನ್ಯ ಕಂದಾಯ ಸಚಿವರು ಏನು

ಹೇಳಿದರು ಅದರಲ್ಲಿ ಯಾವುದೇ ಸರಿಯಾದಂಥ ಮಾಹಿತಿ ಇಲ್ಲ. ಇವತ್ತು ಯಾವ ಯಾವ ಜಿಲ್ಲೆಯಲ್ಲಿ ಏನೇನು ಪರಿಸ್ಥಿತಿ ಇದೆ ಎಂಬುದನ್ನು ಹೇಳಿಬಹುದಾಗಿತ್ತು. ಆದರೆ ಅವರು ಏನನ್ನೂ ಹೇಳಲಿಲ್ಲ. ಇಂಥಿಂಥ ತಾಲ್ಲೂಕಿನಲ್ಲಿ ಇಂಥಾ ಪರಿಸ್ಥಿತಿ ಇದೆ ಎನ್ನುವುದನ್ನು ನಾವು ಹೇಳಿದ್ದೆವು. ಮಳೆ ಬರಲಾರದಂಥ ಪರಿಸ್ಥಿತಿ 44 ತಾಲ್ಲೂಗಳಿಲ್ಲಿದೆ ಎಂದು ಹೇಳಿದ್ದೆವು.

ಶ್ರೀ ಹೆಚ್.ಸಿ ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೆ, ಬರಗಾಲ ಬಂದರೆ ಈಗ ಹೋಗುತ್ತಿದ್ದೇವಲ್ಲಾ, ಆಂಧ್ರಪ್ರದೇಶಕ್ಕೆ 7 ಲಕ್ಷ ಟನ್ ಅಕ್ಕಿಯನ್ನು ಕೊಟ್ಟರು ಎಂದು ಹೇಳಿದರು. ಆಂಧ್ರಪ್ರದೇಶದ ಸಪೋರ್ಟ್ ನಿಮಗೆ ಬೇಕು, ಅದಕ್ಕೆ ಕೊಟ್ಟಿದ್ದೀರಿ. ನಮಗೆ ಕೊಡುತ್ತೀರಾ ನೀವು?

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, 8ನೇ ತಾರೀಖಿನಿಂದ ನಾವು ಅಧಿವೇಶನ ಪ್ರಾರಂಭ ಮಾಡಿದ್ದೇವೆ. ನಿಮ್ಮದು ಹೈಟೆಕ್ ಸರ್ಕಾರದ, ಸರಿಯಾದ ಮಾಹಿತಿ ತರೆಸಿಕೊಳ್ಳಲಿಕ್ಕೆ ಆಗಲಿಲ್ಲ. ಆಂಧ್ರಪ್ರದೇಶದವರು ಕೇಂದ್ರ ಸರ್ಕಾರ ಕೊಟ್ಟಿರುವಂಥ ಅಕ್ಕಿಯನ್ನು ಖರ್ಚು ಮಾಡಿದ್ದಾರೆ. ಈ ರಾಜ್ಯಸರ್ಕಾರ ಖರ್ಚು ಮಾಡಲೇ ಇಲ್ಲ. ಇನ್ನು ಹೇಗೆ ಹೆಚ್ಚಿಗೆ ಅಕ್ಕಿ ಕೇಂದ್ರದಿಂದ ಸಿಗುತ್ತದೆ? ಈ ಬರಗಾಲದ ಬಗ್ಗೆ ರಾಜ್ಯಸರ್ಕಾರಕ್ಕೆ ಗಂಭೀರತೆಯೇ ಇಲ್ಲ. ರೈತರು ಸಂಕಷ್ಟದಲ್ಲಿದ್ದಾರೆ. ಇನ್ನು ಮುಂದೆ ಏನು ಮಾಡಬೇಕು, ಯಾವ ರೀತಿ ವ್ಯವಸ್ಥೆ ಮಾಡಬೇಕೆಂಬುದರ ಬಗ್ಗೆ ಯಾವ ಕಳಕಳಿಯೂ ಈ ಸರ್ಕಾರಕ್ಕೆ ಇಲ್ಲ. ಇದು ಹಿಂದಿನಿಂದಲೂ ನಡೆದು ಬಂದಿದೆ. ಇಳಿದ ವಿಷಯಗಳ ಬಗ್ಗೆ ಏನೂ ಉತ್ತರ ಕೊಟ್ಟಿಲ್ಲ. ಬೇರೆ ಬೇರೆ ಜಿಲ್ಲೆಗಳ ಪರಿಸ್ಥಿತಿ ಬಗ್ಗೆ ಏನೂ ಹೇಳಲಿಲ್ಲ ಮತ್ತು ಈ ವಾರದ ಮಳೆ ಪರಿಸ್ಥಿತಿ ಬಗ್ಗೆ ಏನೂ ಹೇಳಲಿಲ್ಲ. ನಾವು ಇವತ್ತು 4-5 ಬೇಡಿಕೆಗಳನ್ನು ಇಟ್ಟಿದ್ದೇವೆ. ಬೆಳೆ ವಿಮೆ ಹಣ ಇನ್ನೂ 55 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಕೊಡುವುದಿದೆ. ಸಾಲ ವಸೂಲಾತಿಯನ್ನು ನಿಲ್ಲಿಸಿರಿ ಎಂದು ಹೇಳಿದ್ದೆವು. ಅದಕ್ಕೂ ರಾಜ್ಯಸರ್ಕಾರದಿಂದ ಉತ್ತರ ಇಲ್ಲ. ಇವತ್ತು ಏನಾದರೂ ಮಳೆ ಬರದಿದ್ದರೆ ಬಿತ್ತನೆ ಮಾಡಿದಂಥ ರೈತನು ದೊಡ್ಡ ಸಂಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಾನೆ. ಇಂಥ ರೈತರ ಕಡೆಯಿಂದ ವಸೂಲಾತಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ರೈತರು ಬಿತ್ತನೆಗೆ ಹೋಗುವಂಥ ಪರಿಸ್ಥಿತಿ ಇಲ್ಲ. ಹೊಲಕ್ಕೆ ಹೋಗುವಂಥ ಪರಿಸ್ಥಿತಿ ಇಲ್ಲ. ಅವರ ಟ್ರಾಕ್ಟರ್‌ನ್ನು ಸೀಜ್ ಮಾಡುವಂಥದ್ದು ನಡೆಯುತ್ತಿದೆ. ಹೀಗಾಗಿ ಸಾಲ ವಸೂಲಾತಿಯನ್ನು ನಿಲ್ಲಿಸಿರಿ ಎಂದು ಹೇಳಿದ್ದೆವು. ಅದರ ಬಗ್ಗೆ ನಿಮ್ಮದೇನು ಸ್ಪಷ್ಟೀಕರಣ? ಬಡ್ಡಿ ಮನ್ನಾ ಮಾಡಿ ಎಂದು ಹೇಳಿದ್ದೇವು. ಅದರ ಬಗ್ಗೆ ಸ್ಪಷ್ಟನೆ ಕೊಟ್ಟಿಲ್ಲ. ಮಾನ್ಯ ಸಹಕಾರ ಮಂತ್ರಿಗಳು ಉತ್ತರ **ಕೊಡುತ್ತಾರೋ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೋ,** ಒಟ್ಟಿನಲ್ಲಿ ಯಾವ ಮಂತ್ರಿಗಳಿಂದಲೂ ಸ್ಪಷ್ಟೀಕರಣ ಇಲ್ಲ. ಮಧ್ಯಮಾವಧಿ ಸಾಲವನ್ನು ಧೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಿ, ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಿ ಎಂದು ಹೇಳಿದರೆ ಅದಕ್ಕೆ ಸರ್ಕಾರದ ಕಡೆಯಿಂದ ಏನೂ ಸ್ಪಂದನೆ ಇಲ್ಲ. ಮಾನ್ಯ ಕೃಷಿ ಮಂತ್ರಿಗಳು ತಮ್ಮ ಪಾಲಿನ ಉತ್ತರವನ್ನು ಕೊಟ್ಟುಬಿಟ್ಟು ಹೋಗಿಬಿಟ್ಟರು. ಇದರ ಬಗ್ಗೆ ಇನ್ನೂ ಡಿಸ್‌ಕಶನ್ ಮುಗಿದಿಲ್ಲ. ಪೂರ್ತಿ ಚರ್ಚೆಯಾಗಿಲ್ಲ. ಏನೂ ಒಂದು ಕನ್‌ಕ್ಲೂಷನ್‌ಗೆ ಬಂದಿಲ್ಲ. ಆಗಲೇ ಮಾನ್ಯ ಕೃಷಿಮಂತ್ರಿಗಳು ಮತ್ತು ಅವರ ಅಧಿಕಾರಿಗಳು ಹೀಗೆ ಎಲ್ಲರೂ ಹೋಗಿಬಿಟ್ಟರು. ಸರ್ಕಾರದವರಿಗೆ ಈ ಬರಗಾಲದ ಬಗ್ಗೆ ಎಳಷ್ಟೂ ಗಂಭೀರತೆ ಇಲ್ಲ. ರೈತರ ಕಷ್ಟಗಳ ಬಗ್ಗೆ

ಎಳಷ್ಟೂ ಗಂಭೀರತೆ ಇಲ್ಲ. ಬರಗಾಲ ಕಾಮಗಾರಿ ಬಗ್ಗೆ ಎಳಷ್ಟೂ ಗಂಭೀರತೆ ಇಲ್ಲ. ಇದೇ ರೀತಿ ಸರ್ಕಾರ ನಡೆದರೆ ರಾಜ್ಯದಲ್ಲಿ ಅರಾಜಕತೆ ಮೂಡುತ್ತದೆ, ರೈತರು ದಂಗೆ ಏಳುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದಕ್ಕಾಗಿ ಬೆಳೆ ವಿಮೆ ಹಣ ತಕ್ಷಣ ಬಿಡುಗಡೆಯಾಗಬೇಕು. ಇದು ಎರಡು ತಿಂಗಳ ಹಿಂದೆ ಬಿಡುಗಡೆಯಾಗಬೇಕಾಗಿತ್ತು. ಈಗಾಗಲೇ ಈ ತಿಂಗಳು ಕೊನೆಯಾಗುತ್ತಿದೆ ಅಂದರೆ ಹಣ ಬಿಡುಗಡೆ ಮಾಡುವುದನ್ನು ಮುಂದೂಡುತ್ತಿದ್ದಾರೆಂದು ಅನಿಸುತ್ತದೆ. ಹಾಗಾದರೆ ಬೆಳೆ ವಿಮೆ ಹಣವನ್ನು ಬಿಡುಗಡೆ ಮಾಡುವುದಕ್ಕೆ ಏನು ತೊಂದರೆಯಾಗಿದೆ ಎನ್ನುವುದನ್ನು ಹೇಳಬೇಕು. ಈ ಬೆಳೆ ವಿಮೆ ಬಗ್ಗೆ ರಾಜ್ಯಸರ್ಕಾರ ಸ್ಪಷ್ಟನೆ ನೀಡಬೇಕು.

ಅಧ್ಯಕ್ಷರು:- ನಾನು ಮತ್ತು ಚೇರ್‌ಮನ್‌ರವರು - ಮೊದಲು ಕಂದಾಯ ಮಂತ್ರಿಗಳು ವಿಧಾನಪರಿಷತ್ತಿನಲ್ಲಿ ಉತ್ತರ ಕೊಡುತ್ತಾರೆ ನಂತರ ಇಲ್ಲಿಗೆ ಬರುತ್ತಾರೆ. ಶ್ರೀ ಕೌಜಲಗಿಯವರು ಇಲ್ಲಿ ಉತ್ತರ ಕೊಟ್ಟು ನಂತರ ವಿಧಾನ ಪರಿಷತ್ತಿಗೆ ಹೋಗುತ್ತಾರೆಂದು ನಾವು ಅರೇಂಜ್‌ಮೆಂಟ್ ಮಾಡಿಕೊಂಡಿದ್ದೆವು. ಎರಡೂ ಕಡೆ 3-ಗಂಟೆಯಿಂದ ಈ ವಿಷಯದ ಬಗ್ಗೆ ಉತ್ತರ ಕೊಡಬೇಕಾಗಿದ್ದರಿಂದ ಹೀಗೆ ಆಗಿದೆ. ಶ್ರೀ ಕೌಜಲಗಿಯವರು ಅಲ್ಲಿಗೆ ಹೋಗಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಈ ಬೆಳೆ ವಿಮೆ ಹಣ ಏಕೆ ಬಿಡುಗಡೆಯಾಗಿಲ್ಲ ಎನ್ನುವುದರ ಬಗ್ಗೆ ಯಾರು ಸ್ಪಷ್ಟೀಕರಣ ಕೊಡುವವರು?

ಅಧ್ಯಕ್ಷರು:- 18ನೇ ತಾರೀಖಿನೊಳಗೆ ನಾವು ರಿಲೀಸ್ ಮಾಡುತ್ತೇವೆಂದು ಅಗ್ರಿಕಲ್ಚರಲ್ ಮಿನಿಸ್ಟರ್‌ರವರು ಹೇಳಿದ್ದಾರಲ್ಲಾ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಇದು ಎರಡು ತಿಂಗಳ ಹಿಂದೆ ಬಿಡುಗಡೆಯಾಗಬೇಕಾಗಿದ್ದಂಥ ಹಣ. ಇನ್ನೂ ಕೂಡ ಏಕೆ ಆಗಿಲ್ಲ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು):- ಮಾನ್ಯ ಅಧ್ಯಕ್ಷರೆ, ಈಗಾಗಲೇ ಕ್ರಾಪ್ ಇನ್‌ಶ್ಯೂರೆನ್ಸ್ ಹಣ ಬಿಡುಗಡೆಯಾಗುತ್ತಿದೆ. ನಾನು ಮತ್ತು ಶ್ರೀಮಾನ್ ಧರ್ಮಸಿಂಗ್‌ಜೀಯವರು ಮತ್ತು ಬೇರೆಯವರು ನಮ್ಮ ಜಿಲ್ಲೆ ಬಗ್ಗೆ ನಿನ್ನೆ ಮಾತನಾಡುವಾಗ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿದಾಗ, ಅವರು ಹೇಳಿದ್ದು ಏನೆಂದರೆ, ಸುಮಾರು 56 ಕೋಟಿ ರೂಪಾಯಿಗಳಷ್ಟು ಹೆಚ್ಚು ಕಡಿಮೆ ಅಂದಾಜು, ಈಗಾಗಲೇ ಇನ್‌ಶ್ಯೂರೆನ್ಸ್ ಅಮೌಂಟ್ ಸ್ಯಾಂಕ್ಷನ್ ಆಗಿದೆ. The total claims to be settled for khariff 2001. Rs. 53.82 crores. Total released from Government of Karnataka for claim settlement. Balance to be released after recondiation, that is hardly Rs. 1.90 crores. ಇನ್ನು ಒಂದು ಕೋಟಿ 90 ಲಕ್ಷ ರೂಪಾಯಿಗಳು ಮಾತ್ರ ರಿಲೀಸ್ ಮಾಡುವಂಥದ್ದು ಉಳಿದಿದೆ. ಆದರೆ 53 ಕೋಟಿ 82 ಲಕ್ಷ ರೂಪಾಯಿಗಳನ್ನು ಈಗಾಗಲೇ ರಿಲೀಸ್ ಮಾಡಿದ್ದಾರೆ ಉಳಿದ ಒಂದು ಕೋಟಿ ತೊಂಬತ್ತು ಲಕ್ಷ ರೂಪಾಯಿಗಳನ್ನು ನಂತರ ಮಾಡಲಾಗುವುದು. 2002 ರಂದು ಕೂಡ Claims settled as on 13.6.2002 is Rs. 20.28. Crores Claims settled on 8.7.2002 is Rs. 57.66 crores and Expected settlement by 15.7.2002 is Rs. 36.00 crores. Altogether,

ಈಗಾಗಲೇ ನಾನು ಹೇಳಿದ ಹಾಗೆ ಸ್ವಲ್ಪ ಹೆಚ್ಚು ಕಡಿಮೆ 56 ಕೋಟಿ ರೂಪಾಯಿಗಳಷ್ಟು ಹಣ ಮಂಜೂರು ಆಗಿ ಈಗ ಡಿಸ್ಬರ್ಸ್‌ಮೆಂಟ್ ನಡೆದಿದೆ, ಗುಲ್ಬರ್ಗಾದಲ್ಲೂ ಸಹ ಮೊನ್ನೆಯಿಂದ ಕೊಡುವುದಕ್ಕೆ ಅವರು ಪ್ರಾರಂಭಿಸಿದ್ದಾರೆ, ರಾಜ್ಯದ ಇತರೆ ಕಡೆಗಳಲ್ಲೂ ಕೂಡ ಅದೇ ರೀತಿ ಕೊಡುತ್ತಿದ್ದಾರೆ, ಬಹುಶಃ ಇವತ್ತಲ್ಲ ನಾಳೆ ನಿಮ್ಮ ಕಡೆ ಕೂಡ ಹಣ ಬರುತ್ತದೆ.

ಶ್ರೀ ಜಗದೀಶ್ ಶೆಟ್ಟರ್:- ಕ್ಲೇಮು ಇರುವುದು 111 ಕೋಟಿ ರೂಪಾಯಿಗಳು, ರೈತರು 14 ಕೋಟಿ ರೂಪಾಯಿಗಳನ್ನು ತುಂಬಿದ್ದು, ಒಟ್ಟಾರೆ ಹಣ 132 ಕೋಟಿ ರೂಪಾಯಿಗಳು ಇದರಲ್ಲಿ 14 ಕೋಟಿ ರೂಪಾಯಿಗಳನ್ನು ಕಳೆದರೆ 111 ಕೋಟಿಯಲ್ಲಿ ಕೇವಲ 53 ಕೋಟಿ ರೂಪಾಯಿಗಳನ್ನು ಮಾತ್ರ ಕ್ಲೇಮ್ ಸೆಟಲ್ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಹಾಗಾದರೆ ಇಳಿದ ಅಮೌಂಟ್ ಯಾವಾಗ ಕೊಡುತ್ತೀರಿ? ಬೇರೆ ಬೇರೆಯದಕ್ಕೆ ಮನ್ನಾ ಮಾಡುತ್ತೀರಿ, ರೈತರಿಗೆ ಹಣ ಕೊಡುವುದಕ್ಕಾಗಿವುದಿಲ್ಲವೆ? ನೂರಾರು ಕೋಟಿ ರೂಪಾಯಿಗಳನ್ನು ಅಬಕಾರಿ ಲಾಬಿಗೆ ಕೊಟ್ಟು ಕರ ಮನ್ನಾ ಮಾಡುತ್ತೀರಿ, ಆದರೆ ರೈತರಿಗೆ ಹಣ ಕೊಡಲಿಕ್ಕೆ ನಿಮಗೆ ಆಗುವುದಿಲ್ಲವೇ 8ನೇ ತಾರೀಖು ಈ ಸದನ ಪ್ರಾರಂಭವಾಗಿದ್ದು, ಈಗಾಗಲೇ ನಾವು ಈ ವಿಷಯವನ್ನು ಸಾಕಷ್ಟು ಸಾರಿ ಪ್ರಸ್ತಾಪಿಸಿದ್ದೇವೆ. ರೈತರು ಅಲ್ಲಿ ಸಾಯುತ್ತಿದ್ದಾರೆ, ಹೀಗಿದ್ದಾಗ ನಿಮಗೆ ಅಲ್ಲಿ ಹಣ ಬಿಡುಗಡೆ ಮಾಡುವುದಕ್ಕೆ ಆಗುವುದಿಲ್ಲವೇ ಎಲ್ಲಿಂದಲಾದರೂ ಹಣ ತಂದು ರೈತರಿಗೆ ಬಿಡುಗಡೆ ಮಾಡಬಹುದಾಗಿತ್ತಲ್ಲವೇ? ಏಕೆ ನೀವು ಈ ಕೆಲಸ ಮಾಡಲಿಲ್ಲ? ಇವತ್ತು ನೀವು ರೈತ ವಿರೋಧಿ ಧೋರಣೆಯನ್ನು ಮಾಡುತ್ತಿದ್ದೀರಿ ಇವತ್ತು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಆತ್ಮಹತ್ಯೆ ಮಾಡಿಕೊಂಡಿದ್ದಂಥ ಕುಟುಂಬಗಳಿಗೆ ನೀವು ಪರಿಹಾರ ಕೊಡುತ್ತಿರೋ ಇಲ್ಲವೋ ಅದನ್ನು ದಯಮಾಡಿ ತಾವು ಹೇಳಬೇಕಾಗುತ್ತದೆ. ಇಲ್ಲಿಯವರೆಗೆ ನೀವು ಅದರ ಬಗ್ಗೆ ಇನ್ನೂ ಏನೂ ಹೇಳಿಲ್ಲ. ಮಾನ್ಯ ಕೌಜಲಗಿಯವರು, ಅದಕ್ಕೆ ಕ್ಯಾಬಿನೆಟ್ ಸಬ್ ಕಮಿಟಿ ಇದೆ ಎಂದು ಹೇಳುತ್ತಾರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ರೈತರಿಗೆ ಏನೂ ಪರಿಹಾರ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಈಗ 45 ತಾಲ್ಲೂಕುಗಳಲ್ಲಿ 11 ಬಿಲ್ಲೆಗಳಲ್ಲಿ ಕ್ರಾಪ್‌ಕಟಿಂಗ್ ಎಕ್ಸ್‌ಪೆರಿಮೆಂಟ್ಸ್ ಮಾಡಿ ಸುಮಾರು Remission of Land Revenue in 45 ತಾಲ್ಲೂಕಿಗೆ ನಾವು ಕಂಪ್ಲೀಟಾಗಿ ರೆವಿನ್ಯೂವನ್ನು ಮನ್ನಾ ಮಾಡಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಒಂದು ಎಕರೆಗೆ ಒಂದು ರೂಪಾಯಿ 70 ಪೈಸೆ ಇರುತ್ತದೆ, ಒಟ್ಟಾರೆಯಾಗಿ 5 ಸಾವಿರ ರೂಪಾಯಿಗಳು ಆಗಬಹುದು, ಎಂಥ ದೊಡ್ಡದು ಹೇಳುತ್ತೀರಿ? ಖುಷ್ಕಿ ಜಮೀನಿಗೆ ಒಂದು ರೂಪಾಯಿ ಅಥವಾ ಒಂದೂವರೆ ರೂಪಾಯಿ ಇರುತ್ತದೆ. ಅದನ್ನು ದೊಡ್ಡದಾಗಿ ಹೇಳಿದರೆ ಹೇಗೆ? ಇದು ಯಾವ ನ್ಯಾಯ? ಈ ತರಹ ಇವರು ನಮಗೆ ಬರ ಪರಿಹಾರದ್ದು ಹೇಳುತ್ತಾರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಯಾವ್ಯಾವ ತಾಲ್ಲೂಕುಗಳಲ್ಲಿ ಮತ್ತು ಜಿಲ್ಲೆಗಳಿಂದ ಕ್ರಾಪ್ ಎಕ್ಸ್‌ಪೆರಿಮೆಂಟ್ ಬಂದಿದೆ ಅವುಗಳಿಗೆ ರೆಮಿಷನ್ ಕೊಟ್ಟಿದ್ದೇವೆ. ಇನ್ನು ಬಂದರೆ ಅದಕ್ಕೂ ಕೊಡುತ್ತೇವೆ. ನಮ್ಮ ರಿಸರ್ವ್ ಬ್ಯಾಂಕ್ ಗೈಡ್‌ಲೈನ್ಸ್ ಪ್ರಕಾರ ಬ್ಯಾಂಕ್ ಲೋನ್ಸ್‌ನ್ನು ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್‌ಗೆ 5 ವರ್ಷಗಳ ರೀ ಷೆಡ್ಯೂಲ್ ಮಾಡಿದ್ದೇವೆ. ಇನ್ನು ಯಾವ ರೈತರಿಗೆ ಕೊಡಬೇಕು?

ಶ್ರೀ ಜಗದೀಶ್ ಶೆಟ್ಟರ್:- ನಾನು ಕೇಳುತ್ತಿರುವುದು ಹಣದ ಬಗ್ಗೆ, 55 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಆಗುತ್ತದೆಯೋ ಇಲ್ಲವೋ ಅದನ್ನು ಹೇಳಿ. 132 ಕೋಟಿಯೊಳಗೆ 55 ಕೋಟಿ ರೂಪಾಯಿಗಳನ್ನು ಕೊಡಬೇಕು, ಈಗ ತಾನೇ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು. ಅದನ್ನು ಹೇಳಿ.

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ:- ಯಾವುದು 55 ಕೋಟಿ ರೂಪಾಯಿ? ಒಂದು ವಾರದೊಳಗೆ ಇನ್‌ಶ್ಯೂರೆನ್ಸ್ ಹಣ ಡಿಸ್‌ಬರ್ಸ್ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಇಲ್ಲಿಯವರೆಗೆ ಏಕೆ ಕೊಡಲಿಲ್ಲ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಇಲ್ಲಿಯವರೆಗೆ ಏಕೆ ಕೊಡಲಿಲ್ಲವೆಂದರೆ, ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಹಣ ಬರಬೇಕಾಗಿತ್ತು.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಇವತ್ತು ಇವರಿಗೆ ರೈತರ ಬಗ್ಗೆ ಕಳಕಳಿಯಿಲ್ಲ, ಬೆಳೆವಿಮೆ ಹಣ ಕೊಡಲಿಕ್ಕೆ ಇವರಿಂದ ಆಗುತ್ತಿಲ್ಲ. ಮಾನ್ಯ ಫೋರ್ಟಿಸ್ ಆಸ್ಪತ್ರೆಯವರ ಕಂಪನಿಗೆ 46 ಕೋಟಿ ರೂಪಾಯಿಗಳನ್ನು ಕೊಡಲಿಕ್ಕಾಗುತ್ತದೆ. ಅವರ ಕಂಪನಿಗೆ ಮನ್ನಾ ಮಾಡಲಿಕ್ಕೆ ಆಗುತ್ತದೆ. ಆದರೆ ರೈತರಿಗೆ ಕೊಡಲಿಕ್ಕಾಗುತ್ತಿಲ್ಲ! ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಕುಟುಂಬದವರಿಗೆ ಪರಿಹಾರ ಕೊಡುವುದಕ್ಕೆ ಆಗುತ್ತಿಲ್ಲ. ಸಾಲ ವಸೂಲಾತಿ ನಿಲ್ಲಿಸಲಿಕ್ಕೆ ಏನೂ ಹೇಳುತ್ತಿಲ್ಲ. ಬಡ್ಡಿ ಮನ್ನಾ ಮಾಡುತ್ತಿಲ್ಲ. ಸಾಲದ ಅವಧಿ ವಿಸ್ತರಣೆ ಮಾಡಲಿಕ್ಕೆ ತಯಾರಿಲ್ಲ, ಹೀಗಾಗಿ ಇವತ್ತು ರೈತರ ವಿರೋಧಿ ಧೋರಣೆಯನ್ನು ಈ ರಾಜ್ಯ ಸರ್ಕಾರ ಅನುಸರಿಸುತ್ತದೆ. ನಾವು ಇಷ್ಟೊಂದು ಚರ್ಚೆ ಮಾಡಿದ್ದರೂ ಸಹ ರಾಜ್ಯ ಸರ್ಕಾರ ರೈತರ ಬಗ್ಗೆ ಎಳ್ಳಷ್ಟು ಕಳಕಳಿ ವ್ಯಕ್ತಪಡಿಸಿಲ್ಲ. ಈ ರೈತ ವಿರೋಧಿ ಧೋರಣೆಯನ್ನು ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರು ಸದನದಿಂದ ಹೊರ ನಡೆದರು)

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ):- ಮಾನ್ಯ ಅಧ್ಯಕ್ಷರೆ, ಕಳೆದ ಮೂರು ದಿನಗಳಿಂದ ಬರಗಾಲದ ಬಗ್ಗೆ ಚರ್ಚೆ ನಡೆದು ಈ ಚರ್ಚೆ ಸಂಪೂರ್ಣವಾಗಿ ಮಾನ್ಯ ಕಂದಾಯ ಮಂತ್ರಿಗಳಿಗೆ ಸಂಬಂಧಪಟ್ಟ ವಿಚಾರವಾಗಿದೆ. ನಾನು ಉದ್ದೇಶಪೂರ್ವಕವಾಗಿ ಮಾತನಾಡಲಿಲ್ಲ. ಏಕೆಂದರೆ, ಹಿಂದಿನ ಎರಡು ವರ್ಷಗಳಲ್ಲೂ ಬರಗಾಲದ ಬಗ್ಗೆ ಮಾತನಾಡುತ್ತಿದ್ದೆ. ನಂತರ ಕಂದಾಯ ಮಂತ್ರಿಗಳು ಎರಡು ಸಾರಿ ಏನು ಉತ್ತರ ಕೊಟ್ಟಿದ್ದರು ಈ ಸಾರಿನೂ ಅದೇ ಉತ್ತರ ಕೊಡುತ್ತಾರೆಂದು ನನಗೆ ಗೊತ್ತಿತ್ತು. ಹೀಗಾಗಿ ನಾವು ಎಷ್ಟೇ ಹೇಳಿದರೂ ಉತ್ತರ ಮಾತ್ರ ಒಂದೇ ರೀತಿ ಎಂದು ಗೊತ್ತಾದ ಮೇಲೆ ನಾನು ಮಾತನಾಡಲಿಕ್ಕೆ ಹೋಗಲಿಲ್ಲ. ಏಕೆಂದರೆ ಅವರ ಮಾತನಾಡತಕ್ಕಂಥ ಧಾಟಿಯೇ ನಮಗೆ ಗೊತ್ತು. ಇವರು ಈಗಾಗಲೇ ಎರಡು ಬರಗಾಲವನ್ನು ಎದುರಿಸಿದ್ದು ಈ ವರ್ಷ ಕೂಡ ಬರಗಾಲ ಬಂದಿದೆ. ಹೊಸ ವರ್ಷ ಪ್ರಾರಂಭವಾಗಿ 3-4 ತಿಂಗಳಾಯಿತು, ಈ ಒಂದು ಬರಗಾಲದ ಪರಿಸ್ಥಿತಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಬೋರ್‌ವೆಲ್ ತೆಗೆಸುವುದಕ್ಕಾಗಿ, ಕುಡಿಯುವ ನೀರಿಗಾಗಿ, ಕೂಲಿಗಾಗಿ ಜನಗಳಿಗೆ ಯಾವ ರೀತಿ ಉದ್ಯೋಗ ಸೃಷ್ಟಿಸಿದ್ದಾರೆ? ಕೇಂದ್ರದಿಂದ ಎಷ್ಟು ಹಣ ಬಂದಿದೆ? ರಾಜ್ಯ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ? ಈ ಎಲ್ಲಾ ವಿಚಾರಗಳನ್ನು ಹೇಳುತ್ತಾರೆಂದು ನಾನು

ಭಾವಿಸಿಕೊಂಡಿದ್ದೆ. ಪ್ರತಿ ವರ್ಷ ಈ ಕೆಲಾಮಿಟಿ ರಿಲೀಫ್ ಫಂಡ್‌ನಲ್ಲಿ ಕೇಂದ್ರ ಸರ್ಕಾರದಿಂದ ಒಂದು ವರ್ಷಕ್ಕೆ ಸುಮಾರು 58 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ. ಆ 58 ಕೋಟಿ ರೂಪಾಯಿಗಳಲ್ಲಿ ಹೋದ ವರ್ಷ ಎಲ್ಲಾ ಮುಗಿದಿದೆ. ಈ ವರ್ಷ ಎಷ್ಟು ಅಲೋಕೇಷನ್ ಆಗಿದೆ? ನಮ್ಮ ರಾಜ್ಯ ಸರ್ಕಾರಕ್ಕೆ ಮೊದಲನೇ ಕಂತಾಗಿ ಎಷ್ಟು ಹಣ ಬಂದಿದೆ? ಅಷ್ಟು ಹಣ ಸಾಕಾಗುತ್ತದೆ ಎಂದು ನಾನು ಹೇಳುವುದಿಲ್ಲ. ಕೇಂದ್ರ ಸರ್ಕಾರ ಏನು ಆ್ಯನುಯಲ್ ಅಲೋಕೇಷನ್ ಇಟ್ಟು ಕೊಂಡಿದ್ದಾರೆ ಆ ಹಣ ಯಾವುದಕ್ಕೂ ಸಾಕಾಗುವುದಿಲ್ಲ. ಇಂಥ ವಿಶೇಷವಾದ ಪರಿಸ್ಥಿತಿಯಲ್ಲಿ ಅವರ ಗೈಡ್‌ಲೈನ್ಸ್ ಪ್ರಕಾರ ಒಂದು ಮನವಿಯನ್ನು ಸಲ್ಲಿಸಬೇಕಾಗುತ್ತದೆ. ಅವರದು ಒಂದು ಪ್ರೊಫಾರ್ಮ್ ಇದೆ, ಅದರ ಪ್ರಕಾರ ಸರಿಯಾದ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಮೆಮೊರ್ಯಾಂಡಂ ಅನ್ನು ಸಬ್‌ಮಿಟ್ ಮಾಡಿದರೆ ಸ್ವಲ್ಪ ಮಟ್ಟಿಗಾದರೂ ಹಣ ಬರುತ್ತಿತ್ತು. ಈ 2-3 ತಿಂಗಳಲ್ಲಿ ಯಾವುದೇ ಪ್ರಯತ್ನ ನಡೆದಿಲ್ಲವೆಂದು ನಾನು ಭಾವಿಸಿದ್ದೇನೆ. ಕೇಂದ್ರ ಸರ್ಕಾರದವರು, ಕಳೆದ ವರ್ಷ ಸಿಆರ್‌ಎಫ್-ನಿಂದ ಹೆಚ್ಚು ಹಣ ನಿರೀಕ್ಷೆ ಮಾಡಬೇಡಿ, ಏನಿದ್ದರೂ ನಮ್ಮಲ್ಲಿ ಯಥೇಚ್ಛವಾಗಿ ಫುಡ್‌ಗ್ರೇನ್ಸ್ ಇದೆ, ಸುಮಾರು 60 ಲಕ್, ಟನ್ ಎಫ್‌ಸಿಐ ಗೋಡೌನ್‌ನಲ್ಲಿ ಇದೆ. ಅದರಲ್ಲಿ 10 ಲಕ್ಷ ಟನ್ ನೀವು ತೆಗೆದುಕೊಂಡರೂ ಚಿಂತೆಯಿಲ್ಲ, ನಾವು ಬಹಳ ಧಾರಳವಾಗಿ ಬಿಡುಗಡೆ ಮಾಡುತ್ತೇವೆಂದು ಹೇಳಿದರು. ನಾನು ಹೇಳುತ್ತೇನೆ, ನೀವು 10 ಲಕ್ಷ ಟನ್ ಅಲ್ಲ, ಒಂದು ಲಕ್ಷ ಟನ್ ಕೂಡ ಇವತ್ತಿಗೂ ಬಿಡುಗಡೆ ಮಾಡಿಸಿಕೊಂಡಿಲ್ಲ. ಅದು ನೂರಕ್ಕೆ ನೂರರಷ್ಟು ಮುಫತ್ತಾಗಿ ಕೇಂದ್ರ ಸರ್ಕಾರ ಕೊಡುತ್ತದೆ. ಅದನ್ನು ನೀವು ಬಿಡುಗಡೆ ಮಾಡಿ, ಬಡವರಿಗಾಗಿ ಕೂಲಿಗಾಗಿ ಕಾಳು, ಅಥವಾ ಸಣ್ಣ ಪುಟ್ಟ ರಸ್ತೆಗಳ ರಿಪೇರಿಗೋ, ಕಲವರ್ಟ್ ಮಾಡುವುದಕ್ಕೋ ಕೆರೆಗಳ ಹೂಳು ಎತ್ತುವುದಕ್ಕೋ ಇಂಥ ಕಡೆ ಉಪಯೋಗಿಸಬಹುದಾಗಿತ್ತು. ಆ ಒಂದು ಕೆಲಸವನ್ನು ತಾವು ಮಾಡಿಲ್ಲ. ನಮ್ಮ ಮಾನ್ಯ ಶ್ರೀನಿವಾಸಗೌಡರವರು ಹೇಳಿದ ಹಾಗೆ, ಏನೋ ಒಂದು ದೊಡ್ಡ ಸಾಧನೆ ಎಂದು ಮನ್ನಾ ಮಾಡಿದಿರಿ, ಅದು ಪ್ರತಿ ಜಿಲ್ಲೆಗೆ ಬರುತ್ತಿರುತ್ತದೆ. ಅದು ಒಟ್ಟಾರೆಯಾಗಿ 4-5 ಸಾವಿರ ರೂಪಾಯಿಗಳು ಆಗಬಹುದು, ಅದು ಒಂದು ದೊಡ್ಡ ಪರಿಹಾರವೆಂದು ತಿಳಿದು ಕೊಳ್ಳಬಾರದು. ಆ ಕ್ರಾಪ್ ಕಟಿಂಗ್ ಎಕ್ಸ್‌ಪೆರಿಮೆಂಟ್ ಪದ್ಧತಿ ಏನು ಇದೆ ಇದು ಸರಿಯಿಲ್ಲ. ಇದನ್ನು ನಮ್ಮ ಕಾಲದಿಂದಲೂ ಹೇಳುತ್ತಿದ್ದೇವೆ, ಇದಕ್ಕೆ ಬೇರೆ ಪದ್ಧತಿ ಮಾಡಬೇಕು. ಕ್ರಾಪ್ ಕಟ್ಟಿಂಗ್ ಎಕ್ಸ್‌ಪರಿಮೆಂಟ್ ಮಾಡಬೇಕಾದರೆ, ಈಗೇನು ಹೋಬಳಿ ಮತ್ತು ತಾಲ್ಲೂಕು ಮಟ್ಟದಲ್ಲಿ ಇಟ್ಟುಕೊಂಡಿದ್ದೀರಿ, ಅದನ್ನು ಗ್ರಾಮ ಪಂಚಾಯಿತಿ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕು. ವೈಜ್ಞಾನಿಕವಾಗಿ ನೀವು ಕಂಡು ಹಿಡಿಯಬೇಕು. ಅದಕ್ಕೆ ಪ್ರತಿಯೊಬ್ಬರನ್ನು ಇನ್ಸೂರೆನ್ಸ್‌ಗೆ ಕವರ್ ಮಾಡಬೇಕು ಎಂದು ಹೇಳಿದ್ದಾರೆ. ನಾನು ಏನು ಹೇಳುತ್ತೇನೆಂದರೆ, ಹೋಬಳಿ ಮಟ್ಟಕ್ಕೆ ಇನ್ನು ಸರಿಯಾಗಿ ಇನ್ಸೂರೆನ್ಸ್ ಕವರ್ ಮಾಡಲಿಕ್ಕೆ ಆಗಿಲ್ಲ, ಇನ್ನು ಗ್ರಾಮ ಪಂಚಾಯಿತಿ ಮಟ್ಟಕ್ಕೆ ಆಗುತ್ತದೆಯೇ? ಪ್ರತಿಯೊಬ್ಬರಿಗೂ ಅಕೌಂಟ್ ಅನ್ನು ಓಪನ್ ಮಾಡಿಸುತ್ತಿಲ್ಲ, ಅದು ಮೊದಲು ಆಗಬೇಕು. ಎಷ್ಟು ಹಣ ಕೇಂದ್ರ ಸರ್ಕಾರದಿಂದ ಬಂತು? ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ನಾವು ಕಳೆದ ಸಾರಿ ಬೋರ್‌ವೆಲ್ ತೆಗೆಸಿದ್ದಕ್ಕೆ, ಕಾಮಗಾರಿ ಮಾಡಿದ್ದಕ್ಕೆ, ಇನ್ನೂ ಹಣ ಬಿಡುಗಡೆ ಮಾಡಿಲ್ಲ. ನಮ್ಮ ಜಿಲ್ಲೆಗಳಲ್ಲಿ ಹೋಗಿ ಕೇಳಿದರೆ, ಇನ್ನೂ ಹಣ ಬಿಡುಗಡೆ ಮಾಡಿಲ್ಲವೆಂದು ಹೇಳುತ್ತಾರೆ. ಆ ರೀತಿ ಇರುವಾಗ ಈ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಿದ್ದೀರಿ? ಇದನ್ನು ತಾವು ಹೇಳಬೇಕು. ಜೊತೆಗೆ ಕೇಂದ್ರ ಸರ್ಕಾರಕ್ಕೆ

ಮೆಮೊರ್ಯಾಂಡಂ ಕೊಟ್ಟಿದ್ದೀರಾ? ಕಾಲಿಗಾಗಿ ಕಾಳು ಯೋಜನೆಯಲ್ಲಿ ಹೆಚ್ಚು ದಿನಸಿಯನ್ನು ಬಿಡುಗಡೆ ಮಾಡಿಕೊಂಡಿದ್ದೀರಾ? ಆಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿ, ಒಂದು ರೂಪಾಯಿಯನ್ನೂ ಸಹ ಬಿಡುಗಡೆ ಮಾಡದಿದ್ದರೆ ಏನು ಉಪಯೋಗ? ಅದಕ್ಕೆ ಬೇಕಾದಷ್ಟು ಕಮಿಟಿಗಳಾಗಿವೆ. ನೀವು ಹಣ ಬಿಡುಗಡೆ ಮಾಡಬೇಕು. ಈಗಾಗಲೇ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕಮಿಟಿ ಇದೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ನೀವೆಲ್ಲರೂ ಬುದ್ದಿವಂತರು ಇದ್ದೀರಿ ಇಲ್ಲಿ ಚರ್ಚೆ ಮಾಡದೇ ಅಲ್ಲಿ ಚರ್ಚೆ ಮಾಡಿ ಸಜೆಸ್ಟ್ ಮಾಡಬಹುದಲ್ಲವೇ? ಆ ಕಮಿಟಿ ಒಳ್ಳೆಯದಲ್ಲವೇ?

ಶ್ರೀ ಬಿ. ಸೋಮಶೇಖರ್:- ಬರಗಾಲ ಪರಿಸ್ಥಿತಿಗೆ ಸಂಬಂಧಪಟ್ಟಂತೆ ಏನು ಕೆಲಸವಾಗಿದೆ? ಹಾಗೆಯೇ ಇದಕ್ಕಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? ಮತ್ತು ಹೊಸ ಬೋರ್‌ವೆಲ್‌ಗಳನ್ನು ತೋಡಿಸಲಾಗಿದೆಯೇ ಅಥವಾ ಕುಡಿಯುವ ನೀರಿನ ಸಲುವಾಗಿ ಎಷ್ಟು ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಿದ್ದೀರಿ? 'ಕೂಲಿಗಾಗಿ ಕಾಳು' ಯೋಜನೆ ಅಡಿಯಲ್ಲಿ ಎಷ್ಟು ಆಹಾರಧಾನ್ಯಗಳನ್ನು ಬಿಡುಗಡೆ ಮಾಡಿದ್ದೀರಿ? ಇವೆಲ್ಲಕ್ಕಿಂತ ಹೆಚ್ಚಾಗಿ ಮೇವು ಸಮಸ್ಯೆ ಬಹಳ ಮುಖ್ಯವಾದದು. ದನಕರುಗಳಿಗೆ ಎಷ್ಟು ಮೇವು ಒದಗಿಸಿದ್ದೀರಿ? ಮೇವನ್ನು ಎಲ್ಲಿಂದ ತರಲಾಗಿದೆ.? ಹಾಗೆಯೇ, ಎಷ್ಟು ಗೋ-ಶಾಲೆಗಳನ್ನು ನಿರ್ಮಾಣ ಮಾಡಲಾಗಿದೆಯೇ ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಗೋ-ಶಾಲೆಗಳನ್ನು ನಿರ್ಮಾಣ ಮಾಡಿ ಪಂಜಾಬ್ ರಾಜ್ಯದಿಂದ ಹುಲ್ಲನ್ನು ತರಿಸಿ, ಮಂಡ್ಯ ಜಿಲ್ಲೆಯಲ್ಲಿ ಬತ್ತ ಬೆಳೆಯತಕ್ಕಂಥ ರೈತರನ್ನು ಸೇರಿಸಿಕೊಂಡು ಸದರಿ ಹುಲ್ಲನ್ನು ಹಂಚಿದ್ದೇವೆ. ಈ ಕೆಲಸವನ್ನು ನೀವು ಮಾಡಿದ್ದೀರಾ? ಕಳೆದ ಎರಡು ವರ್ಷಗಳಿಂದ ಈ ರೀತಿಯಾದ ಕೆಲಸವನ್ನು ನೀವು ಮಾಡಿಲ್ಲ. ಏನಾದರೂ ಇಂಥ ಕಾರ್ಯಕ್ರಮಗಳನ್ನು ಮಾಡಿದ್ದರೆ ಈ ಸಂದರ್ಭದಲ್ಲಿ ಹೇಳಿ ಸುಮ್ಮನೆ ಇಲ್ಲಿ ತಮಾಷೆ ಮಾಡಿಕೊಂಡು ಹೋದರೆ ಏನು ಬರುತ್ತದೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಈಗಾಗಲೇ ಎರಡು ಬರಗಾಲ ಪರಿಸ್ಥಿತಿಯಲ್ಲಿ ನಾವು ಎಲ್ಲಾ ಕೆಲಸಗಳನ್ನು ಮಾಡಿದ್ದೇವೆ. ತಾವು ಮುಂದೆ ಬರತಕ್ಕಂಥ ಬರಗಾಲದ ಬಗ್ಗೆ ಹೇಳುತ್ತಿದ್ದೀರೋ ಅಥವಾ ಹಿಂದೆ ಆಗಿರತಕ್ಕಂಥ ಬರಗಾಲ ಬಗ್ಗೆ ಹೇಳುತ್ತಿದ್ದೀರೋ?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಹಿಂದೆ ಆಗಿರತಕ್ಕಂಥ ಬರಗಾಲದ ಬಗ್ಗೆಯಾದರೂ ಹೇಳಿ ಅಥವಾ ಮುಂದೆ ಬರತಕ್ಕಂಥ ಬರಗಾಲದ ಬಗ್ಗೆಯಾದರೂ ಹೇಳಿ?

ಶ್ರೀ ಸಿ. ಭೈರೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹಿಂದಿನ ಬರಗಾಲದ ಸಮಯದಲ್ಲಿಯೂ ಇದೆ ಉತ್ತರವನ್ನು ಹೇಳಿದ್ದಾರೆ. ಹಾಗೆಯೇ ನಾಳೆ ಬರತಕ್ಕಂಥ ಬರಗಾಲದ ಬಗ್ಗೆಯೂ ಅದೇ ಉತ್ತರವನ್ನು ಹೇಳುತ್ತಿದ್ದಾರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಈಗ ಕುಡಿಯುವ ನೀರಿನ ವ್ಯವಸ್ಥೆ ಮತ್ತು ದನಕರುಗಳಿಗೆ ಬೇಕಾಗಿರತಕ್ಕಂಥ ಮೇವನ್ನು ಒದಗಿಸತಕ್ಕಂಥ ಕೆಲಸವನ್ನು ಮಾಡಿದ್ದೇವೆ. 'ಕೂಲಿಗಾಗಿ ಕಾಳು' ಯೋಜನೆಯಲ್ಲಿ ಆಹಾರಧಾನ್ಯಗಳನ್ನು ಒದಗಿಸಿದ್ದೇವೆ. ಬರ ಪರಿಹಾರಕ್ಕೆ ಏನೇನು ಅವಶ್ಯಕವಾದ ಕೆಲಸ ಮಾಡಬೇಕೋ ಅವೆಲ್ಲವನ್ನೂ ನಾವು ಮಾಡಿದ್ದೇವೆ. ಬರ ಪರಿಹಾರಕ್ಕೆ 2000-2001ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ 55.93 ಕೋಟಿ ರೂಪಾಯಿಗಳು ಬಂದಿದೆ. ಹಾಗೆಯೇ ನಮ್ಮ

ರಾಜ್ಯ ಸರ್ಕಾರದ್ದು 18.64 ಕೋಟಿ ರೂಪಾಯಿಗಳು ಸೇರಿ, ಒಟ್ಟು 74.57 ಕೋಟಿ ರೂಪಾಯಿಗಳನ್ನು ಆ ಸಂದರ್ಭದಲ್ಲಿ ಬಿಡುಗಡೆ ಮಾಡಲಾಗಿದೆ. ಹಾಗೆಯೇ 2001-2002 ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ 58.72 ಕೋಟಿ ರೂಪಾಯಿಗಳು ಮತ್ತು ರಾಜ್ಯ ಸರ್ಕಾರದಿಂದ 19.58 ಕೋಟಿ ರೂಪಾಯಿಗಳು ಸೇರಿ, ಒಟ್ಟು 78.30 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಹಾಗೆಯೇ 2002-2003ನೇ ಸಾಲಿನಲ್ಲಿ ಕೇಂದ್ರದಿಂದ 61.66 ಕೋಟಿ ರೂಪಾಯಿಗಳು ಮತ್ತು ರಾಜ್ಯ ಸರ್ಕಾರದಿಂದ 20.55 ಕೋಟಿ ರೂಪಾಯಿಗಳು, ಸೇರಿ ಒಟ್ಟು 82.21 ಕೋಟಿ ರೂಪಾಯಿಗಳು ಬಂದಿದ್ದು, ಸದರಿ ಹಣವನ್ನು ಎಲ್ಲಾ ಜಿಲ್ಲೆಗಳಿಗೆ ಬಿಡುಗಡೆ ಮಾಡಿದ್ದೇವೆ. ನಮ್ಮ ಹತ್ತಿರ ಇನ್ನೂ ಹಣ ಇದೆ.

ಶ್ರೀ ಬಿ. ಸೋಮಶೇಖರ್:- ಕಳೆದ ಮೂರು ತಿಂಗಳಲ್ಲಿ ಬಿಡುಗಡೆ ಮಾಡಿರತಕ್ಕಂಥದ್ದರ ಜಿಲ್ಲಾವಾರು ಅಂಕಿ-ಅಂಶಗಳ ಮಾಹಿತಿ ಹೇಳಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಕಳೆದ ಮೂರು ತಿಂಗಳಿಂದ ಯಾವುದೇ ಹಣವನ್ನು ಬಿಡುಗಡೆ ಮಾಡಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ನೀವೂ ಸಹ ಕುದಾಯ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ಆದ್ದರಿಂದ, ನೀವು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಸಚಿವರು ಹೇಳುತ್ತಿರುವುದನ್ನು ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ಬರ ಎಂದು ಘೋಷಣೆ ಮಾಡಿದ ಮೇಲೆ ಬರಕ್ಕೆ ಪರಿಹಾರ ಕೊಡಬೇಕಾಗುತ್ತದೆ. ಬೇಕಾದರೆ ಬರಪರಿಹಾರಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳಿ ಎಂದು ತಾವು ಹೇಳಬಹುದು. ಆದರೆ, ತಾವು ಬರ ಬಂದೇ ಬಿಟ್ಟಿದೆ ಎನ್ನತಕ್ಕಂಥ ರೀತಿಯಲ್ಲಿ ಮಾತನಾಡುತ್ತಿದ್ದೀರಿ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ:- ಬರ ಪರಿಹಾರಕ್ಕೆ ಸಿದ್ಧತೆ ಮಾಡಿಕೊಳ್ಳುವುದಕ್ಕೆ ಅವರು ಯಾವುದೇ ರೀತಿಯ ಪ್ಲಾನನ್ನು ಇನ್ನೂ ಮಾಡಿಕೊಂಡಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಅದನ್ನೇ ಮಾನ್ಯ ಸಚಿವರು ಹೇಳುತ್ತಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಈ ವಿಷಯವನ್ನು ಅವರು ಹೇಳುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ರಾಜ್ಯದಲ್ಲಿ ಬರಗಾಲ ಬಂದೇ ಬಿಟ್ಟಿದೆ ಎನ್ನುವ ರೀತಿಯಲ್ಲಿ ತಾವು ಮಾತನಾಡುತ್ತಿದ್ದೀರಿ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್:- ಮುಂದಿನ ಬರಗಾಲವನ್ನು ನಾವು ಸಮರೋಪಾದಿಯಲ್ಲಿ ಎದುರಿಸುತ್ತೇವೆಂದು ಈಗಾಗಲೇ ಅವರು ಹೇಳಿದ್ದಾರೆ. ಮತ್ತೆ ಇದನ್ನು ಬಿಟ್ಟು ಇನ್ನೇನು ಹೇಳಬೇಕು?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಇದಕ್ಕೆ ಸಂಬಂಧಪಟ್ಟಂತೆ ಒಂದು ಪ್ಲಾನ್ ಹಿಂದೂ ಇಲ್ಲ ಮುಂದೂ ಇಲ್ಲ. ಸಮ್ಮನೆ ಹೇಳಿದರೆ ಸಾಕೆ?

ಶ್ರೀ ಹೆಚ್.ಪಿ. ಶ್ರೀಕಂಠಯ್ಯ:- ಪ್ಲಾನ್ ಇಲ್ಲದೇ ಮಾಡುವುಕ್ಕೆ ಆಗುತ್ತದೆಯೇ?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಹಾಗಾದರೆ, ಏನೇನು ಪ್ಲಾನ್ ಮಾಡಿದ್ದೀರಿ ಎಂದು ಹೇಳಿ?

ಶ್ರೀ ಹೆಚ್.ಪಿ. ಶ್ರೀಕಂಠಯ್ಯ:- ಬರಗಾಲದ ಪರಿಸ್ಥಿತಿಗೆ ಸಂಬಂಧಪಟ್ಟಂತೆ ನಾವು ಈಗಾಗಲೇ ಮುಂಜಾಗತೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಹಿಂದೆ ಬರಗಾಲ ಬಂದಾಗ ಏನು ಮಾಡಿದ್ದೇವೋ ಅದೇ ರೀತಿ ಈ ಸಾರಿಯೂ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು:- ಕ್ಲಾರಿಫಿಕೇಶನ್ ಮಾತ್ರ ಕೇಳಿ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ (ಬೇಲೂರು):- ಮಾನ್ಯ ಅಧ್ಯಕ್ಷರೆ, ಇದು ತಮಗೂ ಸಹ ಗೊತ್ತಿದೆ. ಹಾಸನ ಜಿಲ್ಲೆಯಲ್ಲಿ ಸುಮಾರು 40 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿ ಆಲೂಗಡ್ಡೆಯನ್ನು ಬಿತ್ತನೆ ಮಾಡಲಾಗಿದೆ. ಈಗ ಸಕಾಲದಲ್ಲಿ ಮಳೆ ಬಾರದೇ ಇರುವುದರಿಂದ, ಆಲೂಗಡ್ಡೆ ಬಿತ್ತನೆ ಸಂಪೂರ್ಣವಾಗಿ ಹೋಗಿದೆ. ಈಗ ನೀವು ಏನು ಮಾಡಿದ್ದೀರಿ ಎಂದರೆ, ಒಂದೊಂದು ತಾಲ್ಲೂಕಿಗೆ ಒಂದು ಯೂನಿಟ್ ಮಾಡಿದ್ದೀರಿ, ಆದ್ದರಿಂದ ಈಗ ತಾಲ್ಲೂಕು ಮಟ್ಟದಲ್ಲಿ ಬೆಳೆ ಹೋದರೆ ವಿಮೆ ಹಣ ಕೊಡುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಆದ್ದರಿಂದ, ಇದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ಹೋಬಳಿ ಯೂನಿಟ್ ಅಥವಾ ಎನ್‌ಟೈರ್ ತಾಲ್ಲೂಕು ತೆಗೆದುಕೊಂಡು ಬೆಳೆ ಹೋಗಿರತಕ್ಕಂಥ ರೈತರಿಗೆ ಪರಿಹಾರದ ಹಣ ಕೊಡುತ್ತೀರಾ ಎನ್ನತಕ್ಕಂಥ ವಿಚಾರವನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕು? ಇವತ್ತಿನ ದಿವಸ ಒಂದು ಎಕರೆ ಪ್ರದೇಶದಲ್ಲಿ ಆಲೂಗೆಡ್ಡೆಯನ್ನು ಬಿತ್ತನೆ ಮಾಡಬೇಕಾದರೆ ಸುಮಾರು 10 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಈಗಾಗಲೇ ಹಾಸನ ಜಿಲ್ಲೆಯಲ್ಲಿ ನಾಶವಾಗಿರತಕ್ಕಂಥ ಬೆಳೆಗೆ ಸಂಬಂಧಪಟ್ಟಂತೆ ಪರಿಹಾರವನ್ನು ಕೊಡುತ್ತೀರಾ?

ಶ್ರೀ ಕೆ. ಷಡಾಕ್ಷರಿ (ತಿಪಟೂರು):- ಮಾನ್ಯ ಅಧ್ಯಕ್ಷರೆ, ಈಗಾಗಲೇ ಬಿಜೆಪಿ ಸದಸ್ಯರೆಲ್ಲರೂ ಕೂಡ ಸಭಾತ್ಯಾಗ ಮಾಡಿದ್ದಾರೆ. ಆದರೆ. ಮಾನ್ಯ ಪುಟ್ಟರಂಗನಾಥ್‌ರವರು ಮಾತ್ರ ಇಲ್ಲಿಯೇ ಕುಳಿತುಕೊಂಡಿದ್ದಾರೆ.

ಶ್ರೀ ಹೆಚ್.ಪಿ. ಶ್ರೀಕಂಠಯ್ಯ:- ಸಧ್ಯಕ್ಕೆ ಆಲೂಗಡ್ಡೆ ಪರಿಹಾರದ ಬಗ್ಗೆ ಇರಲಿ, ಈ ಸಾರಿ ಆಲೂಗಡ್ಡೆ ಬೆಳೆ ಬಹಳ ಚೆನ್ನಾಗಿ ಬಂದಿದೆ. ನಾನು ಮತ್ತು ಮಾನ್ಯ ಹನುಮೇಗೌಡರು ನೋಡಿಕೊಂಡು ಬಂದಿದ್ದೇವೆ. ಒಂದು ವೇಳೆ ಮುಂದೆ ಮಳೆ ಬಾರದೆ ಹೋದರೆ ತೊಂದರೆಯಾಗುತ್ತದೆ.

ಶ್ರೀ ಸಿ. ಭೈರೇಗೌಡ:- ನಮ್ಮ ಊರಿನಲ್ಲಿ ಮಳೆ ಇಲ್ಲದೇ ಆಲೂಗಡ್ಡೆ ಬಿತ್ತನೆ ಮಾಡಿರತಕ್ಕಂಥದ್ದಕ್ಕೆ ಟ್ಯಾಂಕರ್ ಮೂಲಕ ನೀರು ಹಾಕುತ್ತಿದ್ದಾರೆ. ಹಾಗೆಯೇ, ಹಾಸನದಲ್ಲಿಯೂ ಕೂಡ ಆಲೂಗಡ್ಡೆ ಬೆಳೆಗೆ ಟ್ಯಾಂಕರ್ ಮೂಲಕ ನೀರು ಬಿಡುತ್ತಿದ್ದಾರೆ. ಮಾನ್ಯ ಕಂದಾಯ

ಮಂತ್ರಿಯವರಿಗೆ ಇದನ್ನು ನೋಡುವುದಕ್ಕೆ ಇಲ್ಲ. ಆದರೆ, ಬೆಂಗಳೂರಿನಲ್ಲಿ ಅವರ ಮನೆಯ ಕಾಂಪೌಂಡ್ ಒಳಗೆ ಚೆನ್ನಾಗಿ ಬಂದಿರತಕ್ಕಂಥ ಆಲೂಗಡ್ಡೆಯ ಬೆಳೆಯನ್ನು ನೋಡಿ ಬಹಳ ಚೆನ್ನಾಗಿ ಬಂದಿದೆ ಎಂದು ಅವರು ಹೇಳುತ್ತಿದ್ದಾರೆ ಎಂದು ಕಾಣುತ್ತದೆ.

ಶ್ರೀ ಹೆಚ್.ಪಿ. ಶ್ರೀಕಂಠಯ್ಯ:- ಆಲೂಗಡ್ಡೆ ಬಿತ್ತನೆ ಮಾಡಿ ಫಸಲು ಚೆನ್ನಾಗಿ ಬಂದಿರತಕ್ಕಂಥದ್ದನ್ನು ನಾವು ಕಣ್ಣಾರೆ ನೋಡಿಕೊಂಡು ಬಂದಿದ್ದೇವೆ. ಮುಂದೆ ಮಳೆ ಬರದೇ ಇದ್ದರೆ ಮಾತ್ರ ಬೆಳೆ ನಾಶವಾಗುತ್ತದೆ ಒಂದು ವೇಳೆ ಹಾಸನದಲ್ಲಿ ಆಲೂಗಡ್ಡೆ ಬರದೇ ಇದ್ದರೆ, ಚಿಕ್ಕಬಳ್ಳಾಪುರದವರಿಗೆ ದುಡ್ಡಿ ಸಿಗದೇ ಟೋಪಿ ಹಾಕಿಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ನಾನು ಕೃಷಿ ಇಲಾಖೆಯಿಂದ ಮಾಹಿತಿ ತರಿಸಿಕೊಂಡಿದ್ದೇನೆ. ಇವತ್ತಿನ ದಿವಸ ಟೋಟಲ್ ಕ್ಲೈಮ್ ಇರತಕ್ಕಂಥದ್ದು 111.43 ಕೋಟಿ ರೂಪಾಯಿಗಳು ಇದರಲ್ಲಿ ಕೇಂದ್ರ ಸರ್ಕಾರದ್ದು 50 ಭಾಗ ಮತ್ತು ಉಳಿದ 50 ಭಾಗ ರಾಜ್ಯ ಸರ್ಕಾರದ್ದು ಇರುತ್ತದೆ. 21.50 ಕೋಟಿ ರೂಪಾಯಿಗಳಷ್ಟು ಪ್ರೀಮಿಯಂ ಹಣವನ್ನು ಲೆಸ್ ಮಾಡಿ, ಕ್ಲೈಮ್ ಇರತಕ್ಕಂಥ 111.43 ಕೋಟಿ ರೂಪಾಯಿಗಳಲ್ಲಿ ಕೇಂದ್ರ ಸರ್ಕಾರದ ಪಾಲಿನ ಹಣವನ್ನು ಬಿಡುಗಡೆ ಮಾಡಿದೆ. ಹಾಗೆಯೇ ನಮ್ಮ ಪಾಲಿನ ಹಣವಾದ 53.37 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ.

ಶ್ರೀ ಎಸ್.ಎನ್. ಪಾಟೀಲ್:- ಕೇಂದ್ರ ಸರ್ಕಾರದಿಂದ ಈ ಹಣ ಯಾವಾಗ ಬಂತು?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಾನು ಹೇಳತಕ್ಕಂಥದ್ದನ್ನು ತಾವು ಸ್ವಲ್ಪ ಕೇಳಿ.

ಅಧ್ಯಕ್ಷರು:- ಮೈನ್ಯುಟ್ ಡೀಟೈಲ್ಸ್ ಎಲ್ಲವನ್ನೂ ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಎಸ್.ಎಸ್. ಪಾಟೀಲ್:- ಕೇಂದ್ರ ಸರ್ಕಾರದಿಂದ ಬಂದಿರತಕ್ಕಂಥ ಹಣದಲ್ಲಿ ಇವರು ಸಂಬಳ ಕೊಟ್ಟಿದ್ದಾರೆ. ರೈತರಿಗೆ ದುಡ್ಡು ಕೊಡುವುದಕ್ಕೆ ಇವರ ಹತ್ತಿರ ದುಡ್ಡಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಾನು ಹೇಳತಕ್ಕಂಥದ್ದನ್ನು ಸ್ವಲ್ಪ ಕೇಳಿ. ನಾವು ಕೂಡ ದಿನಾಂಕ: 8.07.2002ರಂದು 53 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಬಾಕಿ ಇರತಕ್ಕಂಥ 1.90 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ಈಗಾಗಲೇ ಜನರಲ್ ಇನ್‌ಶ್ಯೂರೆನ್ಸ್ ಕಂಪನಿಯವರು ಈ ಹಣವನ್ನು ಹಂಚಿಕೆ ಮಾಡುತ್ತಿದ್ದಾರೆ. ಟ್ರೆಜರಿಯಿಂದ ಕೊಡತಕ್ಕಂಥದ್ದು ಯಾವುದೂ ಬಾಕಿ ಇಲ್ಲ. ಎಲ್ಲಾ ಹಣ ನೇರವಾಗಿ ಇನ್‌ಶ್ಯೂರೆನ್ ಕಂಪನಿಗೆ ಹೋಗಿದೆ. ಅವರು ಈಗಾಗಲೇ ಈ ಹಣವನ್ನು ಹಂಚುತ್ತಿದ್ದಾರೆ. ಉಳಿದ 1.90 ಲಕ್ಷ ರೂಪಾಯಿಗಳನ್ನು ಅದಷ್ಟು ಬೇಗನೆ ಬಿಡುಗಡೆ ಮಾಡುತ್ತೇವೆ. ಆದ್ದರಿಂದ, ಸರ್ಕಾರ ಏನೂ ಮಾಡಿಲ್ಲವೆಂದು ತಪ್ಪು ಮಾಹಿತಿ ಕೊಡತಕ್ಕಂಥದ್ದು ಸರಿಯಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ಇನ್ನು 1.90 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದೀರಿ. ನಿವೇನು 132 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತೋ ಅದರಲ್ಲಿ 20 ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಈ ಹಣ ನಮ್ಮಲ್ಲಿ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್:- 132 ಕೋಟಿ ರೂಪಾಯಿಗಳಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂದು ಹೇಳಿ?

ಅಧ್ಯಕ್ಷರು:- 23 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಈಗಾಗಲೇ ಹೇಳಿದ್ದಾರೆ.

ಶ್ರೀ ಎಸ್.ಎಸ್ ಪಾಟೀಲ್:- 132 ಕೋಟಿ ರೂಪಾಯಿಗಳಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ? ಮತ್ತು ಇನ್ನೂ ಎಷ್ಟು ಕೋಟಿ ಬಿಡುಗಡೆ ಮಾಡಬೇಕೆಂಬುದನ್ನು ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- 132 ಕೋಟಿ ರೂಪಾಯಿಗಳಲ್ಲಿ 21.50 ಕೋಟಿ ರೂಪಾಯಿಗಳ ಪ್ರೀಮಿಯಂ ಹಣ ಕೂಡ ಸೇರಿದೆ. ಪ್ರೀಮಿಯಂ ಹಣ ಇನ್‌ಶ್ಯೂರೆನ್ಸ್ ಕಂಪನಿಯಲ್ಲಿಯೇ ಇರುತ್ತದೆ. ಈ ಹಣವನ್ನು ಬಿಡುಗಡೆ ಮಾಡುವುದಕ್ಕೆ ಬರುವುದಿಲ್ಲ. ಪ್ರೀಮಿಯಂ ಹಣದಲ್ಲಿ 50 ಭಾಗ ಸರ್ಕಾರದ್ದು ಮತ್ತು ಉಳಿದ 50 ಭಾಗ ರೈತರದ್ದು ಇರುತ್ತದೆ. 11 ಕೋಟಿ ರೂಪಾಯಿಗಳ ಕ್ಲೈಮ್ ಹಣದಲ್ಲಿ ಕೇಂದ್ರ ಸರ್ಕಾರ ಅರ್ಧದಷ್ಟು ಈಗಾಗಲೇ ಇನ್‌ಶ್ಯೂರೆನ್ಸ್ ಕಂಪನಿಗೆ ಬಿಡುಗಡೆ ಮಾಡಿದೆ. ಹಾಗೆಯೇ ನಮ್ಮ ಭಾಗದ 55 ಕೋಟಿ ರೂಪಾಯಿಗಳಲ್ಲಿ ಈಗಾಗಲೇ ನಾವು 53.27 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಉಳಿದ 1.90 ಲಕ್ಷ ರೂಪಾಯಿಗಳನ್ನು ನಾಳೆ ಅಥವಾ ನಾಡಿದ್ದು ಇನ್‌ಶ್ಯೂರೆನ್ಸ್ ಕಂಪನಿಗೆ ತುಂಬುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್:- ರೈತರಿಗೆ ಇದುವರೆಗೂ ಹಣ ಮುಟ್ಟಿಲ್ಲ.

ಅಧ್ಯಕ್ಷರು:- ತಾವು ಪೂರ್ಣ ಮಾಹಿತಿಗಳನ್ನು ಕೇಳುತ್ತಿದ್ದೀರಿ. ದಯವಿಟ್ಟು ಕ್ಷಮಿಸಬೇಕು.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್:- ಅಲ್ಲಿ ಹೋಗಿದೆ, ಇಲ್ಲಿ ಹೋಗಿದೆ ಎಂದರೆ ಹೇಗೆ? ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದೀರಿ. ರೈತರಿಗೆ ಇನ್ನೂ ಹಣ ಮುಟ್ಟಿಲ್ಲ.

5.40 ಪಿ.ಎಂ

ಶ್ರೀ ವಿ.ಎಸ್. ಕೌಜಲಗಿ ಕೃಷಿ ಸಚಿವರು:- ನೇರವಾಗಿ ಹಣ ರೈತರ ಮನೆಗೆ ಹೋಗುವುದಿಲ್ಲ, ಅದು ಬ್ಯಾಂಕಿಗೆ ಹೋಗಬೇಕು, ಅಲ್ಲಿಂದ ಸೊಸೈಟಿಗೆ ಹೋಗಬೇಕು, ಸುಮಾರು ಇದಕ್ಕೆ ಹತ್ತು ದಿವಸ ಟೈಮ್ ತೆಗೆದುಕೊಳ್ಳುತ್ತದೆ. ಅದು ಹೋಗಿ ಮುಟ್ಟಿದೆಯಾ ಎಂದು ಕೇಳಿದರೆ, ಮುಟ್ಟುತ್ತದೆ ಅವರ ಕೈಗೆ ಹೋಗಿ ಕೊಡುವುದಕ್ಕಾಗುತ್ತದೆಯೇ?

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್:- ಇವರು ಕೊಟ್ಟಿದ್ದಾರೆ ಎನ್ನುವುದನ್ನು ತರಿಸಿಕೊಳ್ಳಿ.

Mr. SPEAKER:- I am very sorry! ಲೆಕ್ಕವನ್ನು ಕೇಳಿದರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್:- ಇವರು ತಪ್ಪು ಹೇಳಿಕೆಯನ್ನು ಕೊಡುತ್ತಿದ್ದಾರೆ. ರೈತರಿಗೆ ಹೋಗಿ ಮುಟ್ಟಿರುವುದಿಲ್ಲ.

(ಗೊಂದಲ)

ಅಧ್ಯಕ್ಷರು: ನೀವು ಮೈನ್ಯೂಟ್ ಡೀಟೈಲ್ಸ್‌ನ್ನು ಕೇಳಿಕೊಂಡು ಹೋದರೆ ಹೇಗೆ? I cannot under stand

ಮಾನ್ಯ ಸದಸ್ಯರು: ಇವರು ಒಬ್ಬರೇ ರೈತರ ಪರವಾಗಿ ಇದ್ದಂತೆ ಮಾತನಾಡುತ್ತಾರೆ, ಉಳಿದವರು ನಾವು ಯಾರೂ ರೈತರ ಪರ ಅಲ್ಲವೇ ಅಲ್ಲ !

(ಗೊಂದಲ)

ಶ್ರೀ ಎಚ್.ಸಿ. ಶ್ರೀಕಂಠಯ್ಯ: ಹಣ ಇನ್‌ಶ್ಯೂರೆನ್ಸ್ ಕಂಪನಿಗೆ ಹೋಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡರು: ಏನು ಸರ್ ಇದು?

ಅಧ್ಯಕ್ಷರು: ಮಾನ್ಯ ಎಸ್.ಎಸ್. ಪಾಟೀಲರು ಸೀನಿಯರ್ ಮೆಂಬರ್, ದಯಮಾಡಿ ಅವರು ಅರ್ಥವನ್ನು ಮಾಡಿ ಕೊಳ್ಳಬೇಕು. ನಾನು ಏನು ಮಾಡಲಿ ಮಾನ್ಯ ಚಂದ್ರೇಗೌಡರೆ?

(ಗೊಂದಲ)

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಅವರ ಸರ್ಕಾರ ಇದ್ದಾಗ ಕೂಡ ಕ್ರಾಪ್ ಇನ್‌ಶ್ಯೂರೆನ್ಸ್ ರಿಲೀಸ್ ಮಾಡಿದ್ದಾರೆ. 1985 ರಿಂದ 1999ರವರೆಗೆ 15 ವರ್ಷಗಳ ಕಾಲ ರಿಲೀಸ್ ಮಾಡಿದ್ದಾರೆ, ಇದರಲ್ಲಿ ಕ್ಲೈಮ್ ಆಗಿದ್ದು ಬರೀ 67 ಕೋಟಿ ರೂಪಾಯಿಗಳು ಮಾತ್ರ. ನಮ್ಮ ಸರ್ಕಾರ ಬಂದ ಒಂದು ವರ್ಷದಲ್ಲಿಯೇ 132 ಕೋಟಿ ರೂಪಾಯಿಗಳ ಕ್ರಾಪ್ ಇನ್‌ಶ್ಯೂರೆನ್ಸ್ ಮಾಡಿದ್ದೇವೆ. ರೈತರ ಹಿತರಕ್ಷಣೆಯನ್ನು ಮಾಡುವವರು ಯಾರು ಎನ್ನುವುದನ್ನು ವಿಚಾರ ಮಾಡಿ. ನಮ್ಮ ಸರ್ಕಾರ ಪ್ರಚಾರ ಕೊಡುವುದಿಲ್ಲ. ಆದರೆ ನಿಮ್ಮ ಸರ್ಕಾರ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ 10 ಕೋಟಿ ರೂಪಾಯಿಗಳ ಪ್ರಚಾರ ಮಾಡುತ್ತದೆ.

ಶ್ರೀ ಹೆಚ್.ಸಿ. ಮಹದೇವ ಪ್ರಸಾದ್: ನಿಮ್ಮ ಸರ್ಕಾರದ್ದು ಕ್ರೆಡಿಟ್ ಅಲ್ಲ, ಅದು ಕೇಂದ್ರ ಸರ್ಕಾರದ್ದು, ಅವರು ರಿಲ್ಯಾಕ್ಸ್ ಮಾಡಿದರು. ಎಲ್ಲಾ ಫಾರ್ಮ್‌ಗಳಿಗೂ ಅಪ್ಲೈ ಮಾಡಬೇಕೆಂದು ಕೇಂದ್ರ ಸರ್ಕಾರದವರು ಮಾಡಿದರು.

ಶ್ರೀ ಸಿ. ಭೈರೇಗೌಡ: ಮಾನ್ಯ ಪಾಟೀಲರು ಹೇಳಿರತಕ್ಕಂಥದ್ದರಲ್ಲಿ ವಾಸ್ತವಾಂಶ ಇದೆ. ಅವರು ಓಟ್ ಆಫ್ ಕಾಂಟೆಸ್ಟ್ ಹೇಳಿದ್ದಾರೆ. ಏಕೆಂದರೆ ಹಿಂದೆ ಈ ರೀತಿಯಾದಂಥ ಪಾಲಿಸಿ ಇರಲಿಲ್ಲ. ಈ ಯೋಜನೆ ಬೇರೆ ತರಹ ಇತ್ತು. ಆದ್ದರಿಂದ ಈಗ ಹೆಚ್ಚಿಗೆ ಕ್ಲೇಮ್ ಮಾಡುವುದಕ್ಕೆ ಅವಕಾಶ ಆಗುತ್ತಿಲ್ಲ. ರಿವೈಜ್ಡ್ ಇನ್‌ಶ್ಯೂರೆನ್ಸ್ ಪಾಲಿಸಿ, ಬೆಳೆ ವಿಮೆ ಯೋಜನೆ ರಾಷ್ಟ್ರಾದ್ಯಾಂತ ಬಂದಿದ್ದು 1990 ಈಚೆಗೆ. ಇದು ಹೊಸ ಪಾಲಿಸಿಯಾಗಿರುವುದರಿಂದ ಟೈಮ್ ಜಾಸ್ತಿ ಕೊಡುವುದಕ್ಕೆ ಸಾಧ್ಯವಾಯಿತೇ ವಿನಃ ಇವರು ಏನೂ ಎಲ್ಲಿಂದಲೂ ತಂದುಕೊಡಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ನೀವೂ ಕೂಡ ಅಗ್ರಿಕಲ್ಚರ್ ಸಚಿವರಾಗಿದ್ದೀರಿ, ಆಗ ಈ ಪಾಲಿಸಿಯನ್ನು ಮಾಡಬೇಕಾಗಿತ್ತು.

ಶ್ರೀ ಸಿ. ಭೈರೇಗೌಡ: ಸ್ವಾಮಿ ದಯಮಾಡಿ ಕೇಳಿ, ನಾನು ಅದನ್ನು ಕೂಡ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈ ತರಹ ಮಾಡಿಸಬೇಕು ಎನ್ನುವುದರ ಬಗ್ಗೆ ನನ್ನ ಪಾತ್ರ ಕೂಡ ಇದೆ. ಏಕೆಂದರೆ ಕೇಂದ್ರ ಸರ್ಕಾರ ಈ ವಿಮಾ ಯೋಜನೆಯನ್ನು ಜಾರಿಗೆ ಕೊಡುವಂಥದ್ದು, ಇದು ಇಡೀ ಕರ್ನಾಟಕ ರಾಜ್ಯಕ್ಕೆ ಸಿಮೀತವಾಗಿ ಇರತಕ್ಕಂಥದ್ದು ಅಲ್ಲ. ಇಡೀ ದೇಶಕ್ಕೆ ಒಂದೇ ಪಾಲಿಸಿ ಇರತಕ್ಕಂಥದ್ದು, ಆ ಪಾಲಿಸಿ ರಿವೈಸ್ ಆಗಿರುವುದರಿಂದ ಹೆಚ್ಚು ಹಣ ಬರುವುದಕ್ಕೆ ಸಾಧ್ಯವಾಯಿತೇ ವಿನಃ ನಿಮ್ಮ ಸರ್ಕಾರದ ಔದಾರ್ಯದಿಂದ ಬಂದಿರುವ ಹಣ ಏನೂ ಇಲ್ಲ. ತಾವು ಇದನ್ನು ದಯವಿಟ್ಟು ಅರ್ಥಮಾಡಿಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವೂ ಏನೂ ಮಾಡಿಲ್ಲ, ನೀವು ಏನೂ ಕೊಟ್ಟಿಲ್ಲ; ನಾವು ಮಾಡಿದ್ದೇವೆ, ಟ್ರಜರಿಯಿಂದ ಹಣವನ್ನು ಬಿಡುಗಡೆ ಮಾಡಿದ್ದೇವೆ ಏನೂ ಮಾಡಿಲ್ಲವೆಂದು ಹೇಳಿದರೆ ಹೇಗೆ? ಈಗ ನಿಮ್ಮದು ಏನು ಮಹಾ ಎಂದರೆ ಹೇಗೆ?

ಶ್ರೀ ಡಿ.ಆರ್. ಪಾಟೀಲ: ಮಾನ್ಯ ಅಧ್ಯಕ್ಷರೆ, ಅವರ ಸರ್ಕಾರ ಇದ್ದಾಗ ಕೂಡ ಇದೆ ಪಾಲಿಸಿ ಇತ್ತು. ಆಗ ಅವರು ಪ್ರಚಾರ ಮಾಡಿ ರೈತರಿಂದ ಕ್ಲೇಮ್ ತುಂಬಿಸುತ್ತಿರಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಸಾಕಷ್ಟು ಪ್ರಚಾರವನ್ನು ಮಾಡಿ ಕ್ಲೇಮ್ ತುಂಬಿಸಿದ್ದೇವೆ. ರೈತರಿಗೆ ನಾವು ಕ್ಲೇಮ್ ಸಿಗುವಂತೆ ಮಾಡಿದ್ದೇವೆ;

ಶ್ರೀ ಎಸ್.ಎಸ್. ಪಾಟೀಲ: ಸಾಲ ತೆಗೆದುಕೊಂಡವರಿಗೆ ಮಾತ್ರ ಮೊದಲು ಇತ್ತು. ಈಗ ಎಲ್ಲರಿಗೂ ಇದೆ, ಪಾಲಿಸಿಯನ್ನು ಕೇಂದ್ರ ಸರ್ಕಾರ ಬದಲಾವಣೆ ಮಾಡಿದೆ. ಆಗ ಮಾಕ್ಸಿಮಮ್ 10 ಸಾವಿರ ರೂಪಾಯಿಗಳು ಇತ್ತು. ಈಗ ಅದು ಹೆಚ್ಚಾಗಿದೆ, ಇದು?

ಶ್ರೀ ಡಿ.ಆರ್. ಪಾಟೀಲರು: ಎಪಿಎಂಸಿ ಛೇರ್ಮನ್‌ರಾಗಿದ್ದರು, ಅವರಿಗೆ ಎಲ್ಲಾ ಗೊತ್ತಿದೆ.ಸುಮ್ಮನೆ ಅವರು ಹೇಳುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ: ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ನಾವು ರೈತರಿಗೆ ಏನು ಕೊಡಬೇಕೋ ಅದನ್ನು ಕೊಟ್ಟಿದ್ದೇವೆ, ನೀವು ನಮಗೆ ಏನು ಕ್ರೆಡಿಟ್ ಕೊಡಬೇಕಾಗಿಲ್ಲ.

ಶ್ರೀ ಎಸ್.ಎಸ್. ಪಾಟೀಲ: ನೀವು ಅನ್ಯಾಯ ಮಾಡಿ ರೈತರನ್ನು ಹಾಳು ಮಾಡಿದ್ದೀರಿ.

(ಗೊಂದಲ)

ಶ್ರೀ ಎನ್.ಎಸ್. ಬೋಸರಾಜು: ನೀವು ಕೋ-ಆಪರೇಟಿವ್ ಮಿನಿಸ್ಟರ್ ಆಗಿದ್ದಾಗ ರೈತರನ್ನು ಹಾಳು ಮಾಡಿದ್ದೀರಿ, ನಾವು ಹಾಳು ಮಾಡಿರುವುದಿಲ್ಲ. ನೀವು ಒಂದು ಬ್ಯಾಂಕ್ ಬಿಡಲಿಲ್ಲ. ನೀವು ಎಲ್ಲವನ್ನೂ ಸರ್ವನಾಶ ಮಾಡಿದ್ದೀರಿ. ಅವರು ಮಿಸ್‌ಲೀಡ್ ಮಾಡುತ್ತಾರೆ. ಅವರಿಗೆ ಅವಕಾಶ ಕೊಡುತ್ತೀರಿ. ನಮಗೂ ಅವಕಾಶ ಕೊಡಿ-

ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು): ಇನ್‌ಶ್ಯೂರೆನ್ಸ್ ಹಣದ ಬಗ್ಗೆ ಚರ್ಚೆಯಾಯಿತು. ಬರ ಯಶಸ್ವಿಯಾಗಿ ಮುಗಿಸಿರುತ್ತೇವೆ. ಎಲ್ಲಾ ಜಿಲ್ಲೆಗೂ ಹಣವನ್ನು ಕೊಟ್ಟಿದ್ದೇವೆ ಎಂದು ಮಾನ್ಯ ಕಂದಾಯ ಸಚಿವರು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಕಳೆದ ಬಾರಿ

ಬರ ಪರಿಹಾರಕ್ಕೆ ಕುಡಿಯುವ ನೀರಿನ ಹಣವನ್ನು ಸಮರ್ಪಕವಾಗಿ ಕೊಟ್ಟಿದ್ದೇವೆ, ಎಲ್ಲಾಕಡೆ ಕೆಲಸವನ್ನು ಮುಗಿಸಿದ್ದೇವೆ, ಪರಿಪೂರ್ಣವಾದ ಕೆಲಸವನ್ನು ಮಾಡಿದ್ದೇವೆಂದು ಈ ಸದನಕ್ಕೆ ಮಾಹಿತಿ ಕೊಟ್ಟಿದ್ದಾರೆ. ನಾನು ಹೇಳುವುದನ್ನು ದಯಮಾಡಿ ಕೇಳಬೇಕು. ಇದು ತಪ್ಪು ಮಾಹಿತಿ.ನಿನ್ನೆ ದಿವಸ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಂದ ಬಂದಿರುವ ಒಂದು ಫ್ಯಾಕ್ಸ್ ಸಂದೇಶ. ಕಳೆದ ಮೂರು ತಿಂಗಳಲ್ಲಿ ಜನವರಿಯಿಂದ ಏಪ್ರಿಲ್ 15ರವರೆಗೆ ಮಾನ್ಯ ಚಂದ್ರೇಗೌಡರ ನೇತ್ರತ್ವದಲ್ಲಿ ಒಂದು ಕಮಿಟಿಯನ್ನು ಮಾಡಿದ್ದೆವು, ಅದಕ್ಕೆ ಇನ್ನು 35 ಲಕ್ಷ ರೂಪಾಯಿಗಳನ್ನು ಕೊಡಬೇಕು. ಕೆಲಸವನ್ನು ಮಾಡಿ ಇವತ್ತು ಕಂಟ್ರಾಕ್ಟರ್‌ಗಳು ಮನೆಮನೆಗೆ ಅಲೆಯುತ್ತಿದ್ದಾರೆ. ಆ 35 ಲಕ್ಷ ರೂಪಾಯಿಗಳನ್ನು ಇಲ್ಲಿಯವರೆಗೆ ಬಿಡುಗಡೆ ಮಾಡುವುದಕ್ಕಾಗಿಲ್ಲ. ಮಾನ್ಯ ಕಾನೂನು ಸಚಿವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮಾಡಿಕೊಂಡು, ನಾವು ಅನುಮೋದನೆಯನ್ನು ಕೊಟ್ಟಿದ್ದೆವು, ಅದಕ್ಕೆ ಒಂದು ಕೋಟಿ 72 ಲಕ್ಷ ರೂಪಾಯಿಗಳು ಬೇಕು. ಒಟ್ಟು 2 ಕೋಟಿ 7 ಲಕ್ಷ ರೂಪಾಯಿಗಳು ಬೇಕು, ಅದನ್ನು ಎಲ್ಲಿ ಬಿಡುಗಡೆ ಮಾಡಿದ್ದಾರೆ? ಎಲ್ಲಿ ಕಾರ್ಯಕ್ರಮವನ್ನು ಸರಿಯಾಗಿ ರೂಪಿಸಿದ್ದಾರೆ? ಹಣವನ್ನು ಬಿಡುಗಡೆ ಮಾಡುತ್ತಿಲ್ಲ; ಎಲ್ಲಾ ಮುಗಿದಿದೆ, ಏನೂ ಉಳಿದಿರುವುದಿಲ್ಲ, ಎಲ್ಲಾ ವ್ಯವಸ್ಥೆಯಾಗಿದೆ ಎಂದು ಹೇಳಿದ್ದಾರೆ, ಇದು ನನ್ನ ಹತ್ತಿರ ಇರುವ ಮಾಹಿತಿ, ನಾನು ಮಾತನಾಡಿ ಮುಗಿಸುತ್ತೇನೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ: (ಕಂದಾಯ ಸಚಿವರು) ಮಾನ್ಯ ಅಧ್ಯಕ್ಷರೆ, ಆ ಕೆಲಸ ಏನು ಮುಗಿಯಬೇಕಾಗಿತ್ತು ಅದು ಮುಗಿದಿದೆ, ಹಣ ಕೊಡಬೇಕು, ಅದನ್ನು ಕೊಡುತ್ತೇವೆ. ಹಣ ಬಿಡುಗಡೆ ಮಾಡಿಲ್ಲವೆಂದರೆ ಏನು ಅರ್ಥ? ಕಾಮಗಾರಿ ಕೆಲಸ ಮುಗಿದಿದೆ ತಾನೆ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ಇದರ ಬಗ್ಗೆ ಜಿಲ್ಲಾ ಸಚಿವರಿಗೆ ಹತ್ತಾರು ಸಲ ಹೇಳಿದ್ದೇವೆ. ಕಂಟ್ರಾಕ್ಟರ್ ಗಳು ಬರ ಕಾಮಗಾರಿಯನ್ನು ಹಣ ಇಲ್ಲವೆಂದು ಯಾರು ಮಾಡಲು ಮುಂದೆ ಬರುತ್ತಿಲ್ಲ. ಫ್ಯಾಕ್ಸ್ ಸಂದೇಶ ಬಂದಿರುವುದರ ಪ್ರಕಾರ ನಮ್ಮ ಒಂದು ಜಿಲ್ಲೆಗೆ ಎರಡು ಕೋಟಿ 7 ಲಕ್ಷ ರೂಪಾಯಿಗಳು ಬೇಕು. ಇದು ಹಿಂದಿನ ಕತೆಯಾದರೆ, ಮುಂದಿ ಕತೆ ಏನು? ನಾನು ನಿನ್ನೆ ಒಂದು ವಿಷಯವನ್ನು ಕೇಳಿದೆ, ಬೋರ್‌ವೆಲ್‌ಗಳನ್ನು ಕೊರೆಯಲು ಸರ್ಕಾರ ಕೆಲವೊಂದು ರಿಸ್ಟ್ರಿಕ್ಷನ್ ಹಾಕಿದೆ. ಎಲ್ಲಾ ಬೋರ್‌ವೆಲ್‌ಗಳು ಡ್ರೈ ಆಪ್ ಆಗಿವೆ. ಬೋರ್‌ವೆಲ್‌ಗಳು ಯಾವ ರೀತಿಯಾಗಿ ತೆಗೆಸುತ್ತೀರಿ, ಅದಕ್ಕೆ ನಾರ್ಮ್ಸ್ ಏನು? ಕಂದಾಯ ಇಲಾಖೆಯಿಂದ ಒಂದು ಆದೇಶ ಬರುತ್ತದೆ. ಬೋರ್‌ವೆಲ್‌ಳನ್ನು ತೆಗೆಯಿಸಬೇಡಿ ಎಂದು ಇನ್ನೊಂದು ರೂರಲ್ ಡೆವಲಪ್‌ಮೆಂಟ್‌ನಿಂದ ಆದೇಶ ಬರುತ್ತದೆ. ನಾವು ಹಣವನ್ನು ಬಿಡುಗಡೆ ಮಾಡುವುದಿಲ್ಲ. 125ಕ್ಕೆ (ಫೀಟ್‌ಗೆ) ಫಿಕ್ಸ್ ಮಾಡಿ ಎಂದು ಅದರ ಕೆಳಗೆ ಹೋದರೆ ಮಾತ್ರ ಫ್ಲೋರೈಡ್ ಬರುವುದು. ಹೊಸ ಬೋರ್ ವೆಲ್‌ಗಳನ್ನು ತೆಗೆಯಕೂಡದು, ಡ್ರಿಲ್ಲಿಂಗ್ ಮಾಡಿ ಫ್ಲಷ್ ಮಾಡಿಸಿ ಎಂದು ಹೇಳುತ್ತಾರೆ. ಇದಕ್ಕೆ ಏನಾದರೂ ಒಂದು ಪರಿಹಾರ ಬೇಕು, ಇದಕ್ಕೆ ಉತ್ತರವನ್ನು ಹೇಳದೆ ಹೋದರೆ, ಸಾರ್ವಜನಿಕರ ಮುಂದೆ ಹೋಗುರುವುದಕ್ಕೆ ನಮಗೆ ಕಷ್ಟವಾಗುತ್ತದೆ. ಹಣವನ್ನು ಬಿಡುಗಡೆ ಮಾಡುವುದಕ್ಕೆ ಏನು ಮಾಡುತ್ತಿದ್ದಾರೆ? ಮುಂದೆ ಕುಡಿಯುವ ನೀರಿಗೋಸ್ಕರ ಏನು ಕಾರ್ಯಕ್ರಮವನ್ನು ರೂಪಿಸಿದ್ದಾರೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ: ಮಾನ್ಯ ಅಧ್ಯಕ್ಷರೆ, ಈಗ ಕುಡಿಯುವ ನೀರಿಗೆ ಎಲ್ಲಿ ಅಭಾವ ಇದೆ, ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯತಿಗೆ ಪೂರ್ಣವಾದ ಅಧಿಕಾರವನ್ನು ಕೊಟ್ಟಿದ್ದೇವೆ. ಎಲ್ಲೆಲ್ಲಿ ಅವಶ್ಯಕತೆ ಇದೆ, ಅಲ್ಲಿ ಕುಡಿಯುವ ನೀರಿಗಾಗಿ ಬಾವಿಯನ್ನು ತೆಗೆಸುವುದಕ್ಕೆ ಸಿಆರ್‌ಎಫ್ ಫಂಡಿನಿಂದ ದುಡ್ಡನ್ನು ಮಂಜೂರು ಮಾಡಕೂಡದು, ಬಾವಿಯನ್ನು ತೆಗೆಯಕೂಡದೆಂದು ಕೇಂದ್ರ ಸರ್ಕಾರದ ಆದೇಶವಾಗಿದೆ, ಜಿಲ್ಲಾ ಪಂಚಾಯಿತಿ ಹಾಗೂ ಅರ್ಬನ್ ಡೆವಲಪ್‌ಮೆಂಟ್ ಇಲಾಖೆ ಮುಖಾಂತರ ಪಟ್ಟಣ ಹಾಗೂ ಹಳ್ಳಿಗಳಲ್ಲಿ ಬಾವಿಯನ್ನು ತೆಗೆಸತಕ್ಕಂಥ ವ್ಯವಸ್ಥೆಯನ್ನು ಮಾಡುತ್ತಿದೆ. ತೆಗೆದಿರುವ ಬಾವಿಗಳ ಹಣದ ಬಾಕಿ ಇದ್ದರೆ ಅದನ್ನು ಕೊಡಿಸುತ್ತೇವೆ. ಈಗ ಇದನ್ನು ಅಸೆಂಬ್ಲಿಯಲ್ಲಿ ಎತ್ತಬೇಕಾಗಿರಲಿಲ್ಲ. ಎಲ್ಲದಕ್ಕೂ ನನ್ನ ಹತ್ತಿರ ಬರುತ್ತೀರಿ, ಇದನ್ನು ಏಕೆ ಹೇಳಲಿಲ್ಲ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ಮಾನ್ಯ ಕಂದಾಯ ಸಚಿವರು ನಾನು ಹೇಳುವುದನ್ನು ಕೇಳಬೇಕು. ಅಷ್ಟನಿಂದಲಾದರೂ ಬರಲಿ, ಅವ್ವನಿಂದಲಾದರೂ ಬರಲಿ ನಮಗೆ ಯಾರಿಂದಲಾದರೂ ಬರಲಿ ಗ್ರಾಮೀಣಾಭಿವೃದ್ಧಿ ಸಚಿವರು ಇದ್ದಾರೆ, ಕಂದಾಯ ಸಚಿವರು ಇದ್ದಾರೆ. ಯಾರಿಂದಲಾದರೂ ಬರಲಿ, ನಮಗೆ ಬೇಕಾಗಿರತಕ್ಕದ್ದು, ಕೊಳವೆಬಾವಿಗೆ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ?

ಶ್ರೀ ಎಚ್.ಸಿ. ಶ್ರೀಕಂಠಯ್ಯ: ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದು ಯಾವ್ಯಾವ ಹಣವನ್ನು ಬಾಕಿ ಕೊಡಬೇಕು ಎಂಬುದನ್ನು ನೋಡುತ್ತೇನೆ. ಅದಕ್ಕೆ ಖರ್ಚು ಮಾಡುವುದ್ಕೆ ಹಣ ಜಿಲ್ಲಾಧಿಕಾರಿಗಳ ಹತ್ತಿರ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಮಗೇನು ಮಾಹಿತಿಯನ್ನು ಕೊಟ್ಟಿದ್ದಾರೆ ಅದರ ಪ್ರಕಾರ ಚಿಕ್ಕಮಗಳೂರು ಜಿಲ್ಲೆಗೆ ಒಂದು ಕೋಟಿ 67 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದಾರೆ. ಅದರಲ್ಲಿ ಖರ್ಚಾಗಿದ್ದು ಒಂದು ಕೋಟಿ 37 ಲಕ್ಷ ರೂಪಾಯಿಗಳು ಇನ್ನೂ 30 ಲಕ್ಷ ರೂಪಾಯಿಗಳು ಅವರಲ್ಲಿಯೇ ಬಾಕಿಯಿದೆ. ಈ ಮಾಹಿತಿ ತಮ್ಮ ಸ್ಟೇಟ್‌ಮೆಂಟ್ ಪ್ರಕಾರ ಇದೆ. ತಾವು ಹೇಳತಕ್ಕದ್ದು 30 ಲಕ್ಷ ರೂಪಾಯಿಗಳ ಕೆಲಸ ಮಾಡಿದ್ದು ಬಾಕಿಯಿದೆಯೋ? 30 ಲಕ್ಷ ರೂಪಾಯಿಗಳ ಕೆಲಸ ಮಾಡಬೇಕಾಗಿದೆಯೋ ಇದರಲ್ಲಿ ಯಾವುದು ಸರಿಯೆಂದು ನಮಗೆ ಹೇಳಬೇಕು.

ಅಧ್ಯಕ್ಷರು: ಕೊಡದಿದ್ದರೆ ಕೊಡುತ್ತೇವೆಂದು ಕಂದಾಯ ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ನಾನು ಸದನಕ್ಕೆ ತಪ್ಪು ಹೇಳಿಲ್ಲ. ಹೆಚ್ಚುವರಿ ಅನುದಾನ ಕೊಡಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು: ಕೊಡುತ್ತೇನೆಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇನ್ನು ಅನೇಕ ಜಿಲ್ಲೆಗಳಲ್ಲಿ ಒಟ್ಟಾರೆ 42 ಕೋಟಿ ರೂಪಾಯಿಗಳು ಜಿಲ್ಲಾಧಿಕಾರಿಗಳ ಹತ್ತಿರ ಇದೆ.

ಶ್ರೀ ಸಿ. ಭೈರೇಗೌಡ: ಮಳೆ ಮುಂದಕ್ಕೆ ಹೋಗಿರುವ ಕಾರಣದಿಂದ ಬಿತ್ತನೆ ತಡವಾಗಿದೆ. ರೈತರಿಗೆ ಸಾಲದ ವ್ಯವಸ್ಥೆ ಮಾಡಬೇಕೆಂದು ಸಾಲ ಕೊಡಿಯೆಂದು ಕೇಳಿದ್ದೆ, ಅದಕ್ಕೆ ಉತ್ತರ

ಬಂದಿಲ್ಲ. ಬಿತ್ತನೆ ಮಾಡಬೇಕು, ಬರ ಬರುವುದು ಬೇಡ. ಮಳೆ ಬಂದಾಗ ಬಿತ್ತನೆ ಮಾಡಬೇಕಾದರೆ ಆತನಿಗೆ ಸಾಲ ಬೇಕು, ದಯವಿಟ್ಟು ಆದಕ್ಕೆ ಉತ್ತರ ಕೊಡಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: ನಮಗೆ 12 ಜಿಲ್ಲೆಗಳಿಂಗ ಬೇಡಿಕೆ ಬಂದಿದೆ. ಆದರೆ ಚಿಕ್ಕಮಗಳೂರು ಜಿಲ್ಲೆಯಿಂದ ಹಣದ ಬೇಡಿಕೆ ಬಂದಿಲ್ಲ. ನಮಗೆ ಬೇಡಿಕೆ ಬರಬೇಕು. ಶಾಸಕರು ನೀವೇನಾದರೂ ಬಾವಿಗಳನ್ನು ಹೆಚ್ಚಿಗೆ ತೆಗೆಸಿರಬೇಕು. ನಮಗೆ ಬೇಡಿಕೆ ಬಂದಿಲ್ಲ.

ಶ್ರೀ ಕೆ.ಬಿ ಮಲ್ಲಿಕಾರ್ಜುನ: ಜಿಲ್ಲಾಧಿಕಾರಿಗಳು ಸಹಿಯಾಗಿರತಕ್ಕ ಪತ್ರವನ್ನು ಈಗ ತಮಗೆ ಕಳುಹಿಸುತ್ತಿದ್ದೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: ಇನ್ನೂ 35 ಲಕ್ಷ ರೂಪಾಯಿಗಳು ಅವರಲ್ಲಿಯೇ ಇದೆಯೆಂದು ಮಾಹಿತಿಯಿದೆ. ಈಗ ಜಿಲ್ಲಾ ಮಂತ್ರಿಗಳು ಈ ಬಗ್ಗೆ ಹೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ: ಹೆಚ್ಚಿಗೆ ಕಮಿಟ್ ಮಾಡಿದ್ದು ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ. ಭೈರೇಗೌಡ: ನಾನು ಕೇಳಿದ್ದಕ್ಕೆ ಉತ್ತರ ಕೊಡಲಿಲ್ಲ. ರೈತರಿಗೆ ಸಾಲ ಒದಗಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ? ಇದಕ್ಕೆ ಯಾರೂ ಉತ್ತರ ಕೊಡಲಿಲ್ಲ. ಮಾನ್ಯ ಖರ್ಗೆಯವರೇ ಉತ್ತರ ಕೊಡಲಿ. ಇದು ಬಹಳ ಮುಖ್ಯವಾಗಿರತಕ್ಕ ಪ್ರಶ್ನೆ. ಯಾರಾದರೂ ಉತ್ತರ ಕೊಡಲಿ, ಕೊಡಲಿಲ್ಲವೆಂದರೆ ನಾವೇನು ಮಾಡಬೇಕು?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ಫೈನಾನ್ಸಿಯಲ್ ಕಮಿಟ್‌ಮೆಂಟ್. ಸಾಲ ಮನ್ನಾ ಮಾಡುತ್ತೀರಾ? ಅದಕ್ಕೆ ಉತ್ತರವನ್ನು ಈಗಲೇ ಉತ್ತರ ಹೇಳಿ ಅಂದರೆ ಹೇಳುವುದಕ್ಕಾಗುತ್ತದೆಯೆ? ತಾವು ಸರ್ಕಾರ ನಡೆಸಿದ್ದೀರಿ. ಬರಗಾಲ ಪರಿಸ್ಥಿತಿಯ ಬಗ್ಗೆ ಈಗ ಚರ್ಚೆ ನಡೆದಿದೆ. ಯಾವ್ಯಾವ ಜಿಲ್ಲೆಗಳಲ್ಲಿ ಮಳೆ ಬಿದ್ದಿದೆ, ಅವಶ್ಯಕತೆ ಎಷ್ಟಿದೆ, ಕೇಂದ್ರ ಸರ್ಕಾರಕ್ಕೆ ಮೆಮೋರಾಂಡಮ್ ಕೊಟ್ಟಿದ್ದು ಅದು ಕಾನೂನು ಆಗುವುದಕ್ಕೆ ಮುಂಚೆ ಸಾಲ ಮಾಫಿ, ಬಡ್ಡಿ ಮಾಫಿ ಅದರ ಬಿಕ್ ಅಂದರೆ ಏನು ಹೇಳುವುದು?

ಶ್ರೀ ಕೆ.ಬಿ. ಮಲ್ಲಿಕಾರ್ಜುನ್: ನನ್ನ ಫಿಗರ್ಸ್ ಒಂದಿದೆ, ಆಫೀಸರ್ಸ್ ಫಿಗರ್ಸ್ ಬಂದಿದೆ ಇದರಲ್ಲಿ ತಪ್ಪು ಯಾರದೆಂಬುದನ್ನು ಪರಿಶೀಲನೆ ಮಾಡುವುದಕ್ಕೆ ಡಾಕ್ಯುಮೆಂಟ್ಸ್ ಅನ್ನು ತಮಗೆ ಕಳುಹಿಸುತ್ತಿದ್ದೇನೆ.

ಅಧ್ಯಕ್ಷರು: ಆಯಿತು, ಮಂತ್ರಿಗಳು ಪರಿಶೀಲನೆ ಮಾಡುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಎರಡು ದಿವಸಗಳಿಂದ ಬರ ಪರಿಹಾರದ ಬಗ್ಗೆ ಚರ್ಚೆ ಮಾಡಿದ್ದೇವೆ. ಒಂದಂತೂ ನಿಜ. ಚರ್ಚೆಗೆ ಮಣಿದು ಸರ್ಕಾರ ಸ್ವಲ್ಪಮಟ್ಟಿನ ಪರಿಹಾರನ್ನು ರೈತರಿಗೆ ಕೊಟ್ಟಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಬಹಳ ಮುಖ್ಯವಾಗಿ ರೈತರ ಬೆಳೆ ವಿಮೆ ವಿಚಾರದಲ್ಲಿ ಹಣ ಬಿಡುಗಡೆ ಮಾಡದಿರತಕ್ಕದ್ದು ಬಹಳ ಪ್ರಮುಖವಾದುದು. ನೀವು ಸ್ವಲ್ಪಮಟ್ಟಿಗೆ ಸ್ಪಂದಿಸಿದ್ದೀರಿ. ನಮ್ಮ ಹಿರಿಯು ನಾಯಕರಾದ ಎಸ್.ಎಸ್. ಪಾಟೀಲರು ಈ ಹಣ ರೈತರಿಗೆ ಇನ್ನೂ ಬಿಡುಗಡೆಯಾಗಿಲ್ಲ ಎನ್ನುವ ವಿಚಾರವನ್ನು ಹೇಳಿದ್ದಾರೆ. ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ.

ಬಹಳ ಪ್ರಮುಖವಾದ ನಾಲ್ಕೈದು ಬೇಡಿಕೆಗಳನ್ನು ಮುಂದೆ ಇಟ್ಟಿದ್ದೇವೆ. ಸಾಲ ವಸೂಲಾತಿಯನ್ನು ಮುಂದೆ ಹಾಕಬೇಕು. ರೈತರು ಸಾಲವನ್ನು ವಾಪಸ್ಸು ಕೊಡತಕ್ಕ ಸ್ಥಿತಿಯಲ್ಲಿ ಇಲ್ಲ. ಹೊಸದಾಗಿ ಸಾಲ ಕೊಡುವ ಬಗ್ಗೆ ಮಾನ್ಯ ಬೈರೇಗೌಡರು ಹೇಳಿದ್ದಾರೆ. ನಾನು ಈಗ ಸಾಲ ವಸೂಲಾತಿಯನ್ನು ಮಾಡುತ್ತಿದ್ದಾರೆ ಅದನ್ನು ನಿಲ್ಲಿಸಬೇಕೆಂದು ಹೇಳಿದ್ದೇನೆ, ಸರ್ಕಾರ ಸ್ಪಂದಿಸಿಲ್ಲ ಬಡ್ಡಿಯನ್ನು ತಾತ್ಕಾಲಿಕವಾಗಿ ರದ್ದುಮಾಡಬೇಕೆಂದು ಆ ವಿಚಾರವನ್ನು ಹೇಳಿದ್ದೇನೆ. ಅದಕ್ಕೆ ಯಾವುದೇ ರೀತಿಯಲ್ಲಿ ಸ್ಪಂದಿಸಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿರೋಧಪಕ್ಷದ ನಾಯಕರಾಗಿದ್ದವರು. ನಾನು ಆ ಮಾತನ್ನು ಪದೇ ಪದೇ ಹೇಳುತ್ತಿದ್ದೇನೆಂದು ಸಿಟ್ಟು ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ನೀವು ಮಾತನಾಡಿರತಕ್ಕ ರೆಕಾರ್ಡ್ಸ್ ತೆಗೆದು ನೋಡಿ. ನಮ್ಮ ಸಾರ್ಕರ ಇದ್ದಾಗ ಯಾವ್ಯಾವ ಹೌಸ್ ಕಮಿಟಿಗಳನ್ನು ಮಾಡಿದ್ದೇವೆ. ಆ ಹೌಸ್ ಕಮಿಟಿಗಳ ರಿಪೋರ್ಟ್‌ಗಳು ಇವೆ. ರೈತರ ಆತ್ಮಹತ್ಯೆಯಾದ ಸಂದರ್ಭದಲ್ಲಿ ನಾವು ಎಷ್ಟು ಪರಿಹಾರವನ್ನು ಕೊಡುತ್ತಿದ್ದವು. ಕಳೆದ ಎರಡೂವರೆ ವರ್ಷಗಳಿಂದ 180ಕ್ಕಿಂತ ಹೆಚ್ಚು ಜನ ಸತ್ತಿದ್ದಾರೆ. ಅನ್-ನ್ಯಾಚುರಲ್ ಡೆತ್ ಕೇಸ್ ಇವೆಲ್ಲಾ ಸೇರಿ 250 ಜನ ರೈತರು ಸತ್ತಿದ್ದಾರೆ. ಅದರ ಲೆಕ್ಕಾಚಾರ ಸರ್ಕಾರದಲ್ಲಿ ಇಲ್ಲ. ನಾನು ಇವತ್ತು ಒತ್ತಾಯವನ್ನು ಮಾಡುತ್ತಿದ್ದೇನೆ. ಆತ್ಮಹತ್ಯೆಯ ಪ್ರಕರಣಗಳು ಏನಿವೆ. ಅಂತಹವರ ಕುಟುಂಬಗಳಿಗೆ ಒಂದು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡಬೇಕೆನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ಸರ್ವ ಪಕ್ಷಗಳ ಸಮಿತಿ ಮಾಡಿ ಮಾನಿಟರಿಂಗ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದು ಅರ್ಥವಿಲ್ಲದ ಕೆಲಸ ಇವರು ಯಾವಾಗ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ, ಇವರ ಮರ್ಯಾದೆಯನ್ನು ಬೀದಿಯಲ್ಲಿ ಇವತ್ತು ಕಂಟ್ರಾಕ್ಟರ್‌ಗಳು ಹರಾಜು ಮಾಡುತ್ತಿದ್ದಾರೆ. 1200 ಕೋಟಿ ರೂಪಾಯಿಗಳು ಬಾಕಿಯಿದೆಯೆಂದು ಅವರು ಹೇಳುತ್ತಾರೆ. ಇವರು ದುಡ್ಡು ಇದೆಯೆಂದು ಬಂಡವಾಳವಿಲ್ಲದ ಬಡಾಯಿ ಕೊಚ್ಚಿಕೊಳ್ಳತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನಾನಾದರೂ ಹೇಳತಕ್ಕದ್ದು ಇಷ್ಟೆ. ಸರ್ಕಾರ ಪರಿಹಾರ ನಿಧಿ ಬರುತ್ತದೆಂದು ಹೇಳುತ್ತಿದ್ದಾರೆ. ನನಗೆ ಗೊತ್ತಿದೆ. ಮನೆಗಳು ಸುಟ್ಟುಹೋದರೆ, ಬಣವೆಗಳು ಸುಟ್ಟುಹೋದರೆ, ಅದರ ಪರಿಹಾರದ ದುಡ್ಡು ಕೊಡುವುದಕ್ಕೆ ಇವತ್ತು ತಾಲ್ಲೂಕು ಕಛೇರಿಯಲ್ಲಿ ಹಣವಿಲ್ಲ. 500 ರೂಪಾಯಿ, ಸಾವಿರ ರೂಪಾಯಿ ಚೆಕ್‌ಗಳು ವಾರದಲ್ಲಿ ಒಂದು ದಿವಸ ಪಾಸಾಗುತ್ತವೆ. ಇದು ಇರತಕ್ಕ ಪರಿಸ್ಥಿತಿ. ಇದನ್ನು ಮುಚ್ಚಿಟ್ಟುಕೊಳ್ಳುವುದರಲ್ಲಿ ಯಾವುದೇ ರೀತಿಯ ಅರ್ಥವಿಲ್ಲ. ಅದಕ್ಕೋಸ್ಕರ ನಾವು ಒತ್ತಾಯ ಮಾಡುತ್ತೇದ್ದೇವೆ. ಮುಂದೆ ನಮ್ಮ ಸರ್ಕಾರ ಬಂದರೆ, ಜನ ನಮಗೆ ಆಶೀರ್ವಾದ ಮಾಡಿದರೆ ರೈತರ ಆತ್ಮಹತ್ಯೆ ಕುಟುಂಬಗಳಿಗೆ ಇವತ್ತಿನಿಂದ ಯಾರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಆ ಎಲ್ಲಾ ಕುಟುಂಬಗಳಿಗೆ 1 ಲಕ್ಷ ರೂಪಾಯಿ ಬಡ್ಡಿ ಸಮೇತ ಕೊಡುತ್ತೇವೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನೀವು ಕೊಡುವುದಕ್ಕೆ ತೊಂದರೆಯೇನು ಎಂದು ನನಗೆ ಅರ್ಥವಾಗುತ್ತಿಲ್ಲ. ಯಾರೂ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧರಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ಕಡೆಗೆ ಕುಳಿತು ಕೊಂಡು ಏನು ಮಾತನಾಡಿದ್ದಾರೆ ಎನ್ನುವುದನ್ನು ಅವರೇ ಯೋಚನೆ ಮಾಡಲಿ. ಅವರ ವಿವೇಚನೆಗೆ ಇದನ್ನು ಬಿಡುತ್ತೇನೆ. ಈ ರೀತ್ಯ ವಿಚಾರದಲ್ಲಿ ಮೂರು ದಿವಸಗಳಿಂದ ಅಲ್ಲ 15 ದಿವಸಗಳಿಂದ ಒತ್ತಾಯ ಮಾಡುತ್ತಿದ್ದೇವೆ. ಮಾನ್ಯ ಮಹದೇವ್ ರವರು ಇದ್ದಾಗ ಸಹ ಒತ್ತಾಯ ಮಾಡಿದ್ದೇವೆ. ರೈತರು ಬಹಳ ಕಷ್ಟದಲ್ಲಿದ್ದಾರೆ. ಬೆಂಬಲ ಬೆಲೆಯನ್ನು ನೀವು ನಿಗದಿ ಮಾಡಿರಿ ಅಂದರೆ ಅವನ್ನು ಮಾಡಲಿಲ್ಲ. ಸರ್ವ ಪಕ್ಷಗಳ ಮಾನಿಟರಿಂಗ್ ಸಮಿತಿ. ನಾನು ಚೆಕ್‌ಬುಕ್‌ಗೆ ಸಹಿ ಮಾಡುವುದಕ್ಕೆ

ಆಗುತ್ತದೆಯೇ? ನಾನು ಒಬ್ಬ ಫ್ಲೋರೇಲೀಡರ್ ಇದ್ದೇನೆ, ನಮ್ಮವರು 24 ಜನ ಎಂಎಲ್ಎಗಳು ಇದ್ದಾರೆ, 12 ಜನ ಎಂಎಲ್ಸಿಗಳು ಇದ್ದಾರೆ. ನನ್ನ ಕ್ಷೇತ್ರದಲ್ಲಿ ನಾನು 5 ಬೋರ್‌ವೆಲ್‌ಗಳನ್ನು ಹಾಕಿಕೊಳ್ಳಲಿಕ್ಕೆ ಆಗಲಿಲ್ಲ. ಇದನ್ನೆಲ್ಲಾ ಹೇಳಿದ ಮೇಲೆ ರಾತ್ರಿ ಶ್ರೀಕಂಠ್ಯನವರು ನನ್ನ ಮೇಲಿರುವ ವಿಶ್ವಾಸಕ್ಕೆ ಯಾರೋ ಒಬ್ಬ ಅಧಿಕಾರಿಗೆ ಫೋನ್ ಮಾಡಿ ಹೇಳಿದರು. ಆ ಅಧಿಕಾರಿ ಸರ್ಕಾರ ಕೊಡದಿದ್ದರೂ ಪರವಾಗಿಲ್ಲ ನನ್ನ ಖರ್ಚಿನಲ್ಲಿ ಹಾಕಿಸುತ್ತೇನೆಂದು ಹೇಳಿದರು. ಬೇಡ ಆ ಕೆಲಸ ಮಾಡಬೇಡವೆಂದು ಹೇಳಿದೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ: ಮಾನ್ಯ ಸಿಂಧ್ಯಾರವರಿಗೆ ಸಿಆರ್ಎಫ್ ಫಂಡ್‌ನಿಂದ ಬೋರ್‌ವೆಲ್ ಹಾಕಿಸುವುದಕ್ಕೆ ಸಾಧ್ಯವಿರಲಿಲ್ಲ. ಬೆಂಗಳೂರು ಜಿಲ್ಲಾಧಿಕಾರಿಗಳವರಿಗೆ ಹೇಳಿದಾಗ, ಅವರು ಅವರ ತಾಲ್ಲೂಕಿಗೆ ಸಾಕಷ್ಟು ಬೋರ್‌ವೆಲ್‌ಗಳನ್ನು ಹಾಕಿದ್ದೇವೆ. ಎಷ್ಟು ಹಾಕಿದ್ದಾರೆಂದರೆ ಸುಮಾರು 60 ಹಾಕಿದ್ದೇವೆ. 60 ಬೋರ್‌ವೆಲ್‌ಗಳು ಇರುವುದು ಬಹಳ ಸಂತೋಷ. ನಾನು ಪುನಃ ರಾತ್ರಿ ಆರ್‌ಡಿಪಿಆರ್‌ನವರ ಇನ್ನು 5 ಬೋರ್‌ವೆಲ್‌ಗಳನ್ನು ಹಾಕುವುದಕ್ಕೆ ಆದೇಶ ಕೊಟ್ಟಿದ್ದೇನೆ, ಹಾಕುವುದಕ್ಕೆ ಅವರು ಒಪ್ಪಿಸಿಕೊಂಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನನ್ನ ಮೇಲಿನ ವಿಶ್ವಾಸಕ್ಕೆ ನಿನ್ನೆ ರಾತ್ರಿ ಅವರು ಹೇಳಿರುವುದು. ನಿನ್ನೆ ರಾತ್ರಿ ಆ ಅಧಿಕಾರಿ ಫೋನ್ ಮಾಡಿ 5 ಬೋರ್‌ವೆಲ್‌ಗಳನ್ನು ಹಾಕಿಸುತ್ತೇವೆಂದು ಹೇಳಿದ್ದಾರೆ. ಅದು ಬಹಳ ಸಣ್ಣ ವಿಚಾರ. ಸರ್ಕಾರದ ಧೋರಣೆಯ ಬಗ್ಗೆ ಚರ್ಚೆ ನಾವು ಮಾಡಬೇಕಾಗುತ್ತದೆ. ನನಗೆ ಗೊತ್ತಿದೆ. ನಿಮ್ಮ ಹತ್ತಿರ ದುಡ್ಡಿಲ್ಲ. ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸುತ್ತಾರೆ. ಲಾ ಡಿಪಾರ್ಟ್‌ಮೆಂಟ್‌ನವರು ಕೊಕ್ಕೆ ಹಾಕುತ್ತಾರೆ. ಆಮೇಲೆ ಫೈನಾನ್ಸ್ ಡಿಪಾರ್ಟಿಮೆಂಟ್‌ನವರು ಕೊಕ್ಕೆ ಹಾಕುತ್ತಾರೆ. ಇಲ್ಲಿ ನೀರಾವರಿ ಮಂತ್ರಿಗಳು, ಲೋಕೋಪಯೋಗಿ ಮಂತ್ರಿಗಳು ಕುಳಿತಿದ್ದಾರೆ. ಎಲ್ಲಾ ಮಂತ್ರಿಗಳಿಗೂ ಏನೇನು ತೊಂದರೆಗಳು ಇದೆಯೆಂದು ನಮಗೂ ಅರ್ಥವಾಗುತ್ತದೆ. ಬಹಳ ಮುಖ್ಯವಾಗಿ ಇವತ್ತು ರಾಜ್ಯದಲ್ಲಿ ರೈತರ ಪಾಲಿಗೆ ನಿಮ್ಮ ಸರ್ಕಾರದ ಧೋರಣೆಗಳು ಒಂದು ರೀತಿಯಲ್ಲಿ ಶಾಪವಾಗಿವೆ. ಇದರಲ್ಲಿ ಯಾವುದೇ ರೀತಿಯ ಸಂಶಯ ಇಲ್ಲ. ನಿಮಗೆ ಒತ್ತಿ ಒತ್ತಿ ಹೇಳಿದರೂ ಕೂಡ ನೀವೂ ಏನೂ ಮಾಡುತ್ತಿಲ್ಲ. ಆ ಡಾ|| ವಿರೇಶ್ ವರದಿಯನ್ನು ತಿರಸ್ಕಾರ ಮಾಡಿ. ಟರ್ಮ್ಸ್ ಆಫ್ ರೆಪರೆನ್ಸ್‌ನಲ್ಲಿ ಬಹಳ ಬುದ್ಧಿವಂತಿಕೆಯಿಂದ ಮಾಡಿದ್ದೀರಿ. ಅದನ್ನು ತಿರಸ್ಕಾರ ಮಾಡಬೇಕು.ಆತ್ಮಹತ್ಯೆ ಮಾಡಿಕೊಡಂತಹ ರೈತರ ಕಟುಂಬಗಳಿಗೆ ದುಡ್ಡು ಕೊಡಬೇಕೆಂದು ಇವತ್ತೂ ಸಹಿತ ನಾನು ಒತ್ತಾಯ ಮಾಡುತ್ತೇನೆ. ಸಾಲ ವಸೂಲಾತಿಯನ್ನು ನಿಲ್ಲಿಸಬೇಕು ತಕ್ಷಣ ಬಡ್ಡಿ ಮನ್ನಾ ಮಾಡಬೇಕೆಂದು ನಾನು ಹೇಳುತ್ತೇನೆ. ಶಾಶ್ವತವಾದ ಬರ ಪರಿಹಾರ ನಿಧಿಯನ್ನು ಮಾಡಬೇಕು. ಈಗ 67 ಲಕ್ಷ ಏನು ಹಸಿರು ಕಾರ್ಡುಗಳಿವೆ, ಅವುಗಳಿಗೆ ಮತ್ತೆ ಜೀವ ಕೊಡಬೇಕು ಎಂದು ಪರಿಪರಿಯಾಗಿ ಕೇಳಿಕೊಳ್ಳುತ್ತಿದ್ದೇನೆ. ಅದೂ ಸಹಿತ ಆಗಿಲ್ಲ. ಮತ್ತೆ ರೇಷ್ಮೆ ಬೆಂಬಲ ಬೆಲೆಯನ್ನು ಇನ್ನೂ ಘೋಷಣೆ ಮಾಡಿಲ್ಲ. ಸಾರ್ವಜನಿಕ ವಿಚಾರಗಳನ್ನು ನಾವು ನಿರ್ವಿಕಾರವಾಗಿ ಹೇಳಿದಾಗ ಈ ಸರ್ಕಾರ ನಮ್ಮ ಮಾತುಗಳನ್ನು ಕೇಳಬಹುದು ಎಂದು ಹೇಳಿದರೂ ಸಹಿತ ಇವರಲ್ಲಿ ಒಂದು ಸಮನ್ವಯತೆ ಇಲ್ಲ. ಮಾನ್ಯ ಖರ್ಗೆಯವರು ಬಂದ ಮೇಲೆ ಅವರು ಪಕ್ಷಕ್ಕೆ ಬಹಳ ನಿಷ್ಠೆಯಿಂದ ಇರತಕ್ಕವರು, ಅವರೇನೋ ಸ್ವಲ್ಪ ಸಮನ್ವಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದರೆ ಅದು ಆಗುವುದಿಲ್ಲ. ಈ ಸರ್ಕಾರದಲ್ಲಿ ಇವತ್ತು ಸಮನ್ವಯತೆ

ಇಲ್ಲ, ಒಗ್ಗಟ್ಟಿಲ್ಲ. ಸರ್ಕಾರ ರೈತರ ವಿರೋಧಿ ಧೋರಣೆಯನ್ನು ತಾಳಿದೆ. ರಾಜ್ಯದಲ್ಲಿ ಬರ ಬರತಕ್ಕಂಥ ಸ್ಥಿತಿಯಲ್ಲಿ ಭಿನ್ನಮತ ಎಂದು ಹೇಳಿ ಅವರು ಜಗಳ ಕಾಯುತ್ತಿದ್ದಾರೆ. ಇವರ ಧೋರಣೆಯನ್ನು ವಿರೋಧ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

ಜನತಾದಳ (ಯು) ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಭೈರೇಗೌಡ: ಹೊಸದಾಗಿ ಸಾಲ ಕೊಡುತ್ತೇವೆ ಎನ್ನುವ ಒಂದು ಮಾತನ್ನೂ ಕೂಡ ನೀವು ಹೇಳಲಿಲ್ಲ.

(ನಂತರ ಮಾನ್ಯ ಸದಸ್ಯರೂ ಕೂಡ ಸಭಾತ್ಯಾಗ ಮಾಡಿದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಭೈರೇಗೌಡರ ಸರ್ಕಾರ ಇದ್ದಾಗ ಶ್ರೀಮಾನ್ ಶಿವಕುಮಾರ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದರು. ಇದೇ ರೀತಿಯಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದಕ್ಕಾಗಿ ರೈತರಿಗೆ ಏನು ಪರಿಹಾರ ಕೊಡಬೇಕು ಎನ್ನುವುದರ ಬಗ್ಗೆ ಅವರ ಪಕ್ಷದವರೇ ಆದ ಒಬ್ಬರು ಶಾಸಕರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದರು. ಆ ಸಮಿತಿ ಸದನಕ್ಕೆ ಒಂದು ವರದಿಯನ್ನು ಕೊಟ್ಟರು. ಅದರ ಪ್ರಕಾರ ಎಲ್ಲೆಲ್ಲಿ ತೊಗರೀಬೇಳೆಗೆ ಹಾನಿಯಾಗಿದೆ, ರೈತರೇನು ತೊಂದರೆಗೆ ಒಳಗಾಗಿದ್ದಾರೆ, ಅವರಿಗೆ ಏನು ಪರಿಹಾರ ಕೊಡಬೇಕು, ಪ್ರತಿ ಎಕರೆಗೆ ಎಷ್ಟು ಪರಿಹಾರ ಕೊಡಬೇಕು ಎನ್ನತಕ್ಕಂಥಾದ್ದನ್ನು ಅವರು ಶಿಫಾರಸ್ಸು ಮಾಡಿದ್ದರು. ಆ ಶಿಫಾರಸ್ಸುಗಳಲ್ಲಿ ಒಂದು ಚೂರು ಕೂಡ ಇಂಪ್ಲಿಮೆಂಟ್ ಮಾಡಲಿಲ್ಲ. ಅವರೇ ಒಪ್ಪಿಕೊಂಡು ಅವರ ಪಕ್ಷದವರೇ ಆದ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಸಮಿತಿಯನ್ನು ಮಾಡಿದ್ದು. ಇವತ್ತು ನಮಗೆ ಏನು ಆಯಿತು ಎಂದು ಬುದ್ಧಿ ಹೇಳುವುದಕ್ಕೆ ಹೊರಟ್ಟಿದ್ದಾರೆ. ನಾವು ಅಲ್ಲಿ ಒತ್ತಾಯ ಮಾಡಿದ್ದಕ್ಕೆ ಆ ಕಮಿಟಿಯನ್ನು ಅವರು ಮಾಡಿದ್ದರು. ಆ ಕಮಿಟಿಯನ್ನು ಮಾಡಿದ ಮೇಲೆ ಸದನದ ಸದಸ್ಯರೆಲ್ಲರೂ ಕೂಡ ಹೋಗಿ ಒಂದು ವರದಿಯನ್ನು ಸದನಕ್ಕೆ ಕೊಟ್ಟು ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತನ್ನಿ ಎಂದು ಹೇಳಿದರೆ ಅದರಲ್ಲಿ ಒಂದನ್ನೂ ಕೂಡ ಅನುಷ್ಠಾನಕ್ಕೆ ತರಲಿಲ್ಲ. ಈಗ ನಮಗೆ ಬುದ್ಧಿವಾದ ಹೇಳುವುದ್ಕೆ ಹೊರಟಿದ್ದಾರೆ. ಮತ್ತೆ ಇವರ ಸರ್ಕಾರ ಅಧಿಕಾರಕ್ಕೆ ಬಂದರೆ ಬಡ್ಡಿ ಸಹಿತ ಕೊಡುತ್ತಾರಂತೆ. ಆವಾಗ ಬಡ್ಡಿಯನ್ನೆಲ್ಲಾ ಮುಳುಗಿಸಿಕೊಂಡಂಥವರು ಈಗ ಬಡ್ಡಿಸಹಿತ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದ್ದರಿಂದ ಇದು ಬರೇ ವಿರೋಧಕ್ಕಾಗಿ ವಿರೋಧ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಹೇಳಿದ್ದಾರೆಯೇ ಹೊರತಾಗಿ ಬೇರೇನೂ ಇಲ್ಲ. ಸೀಜನಲ್ ಕಂಡಿಷನ್ಸ್ ಬಗ್ಗೆ ತಮಗೆ ಗೊತ್ತಿದೆ. ಜೂನ್ -ಜುಲೈ ತಿಂಗಳಲ್ಲಿ, ಇನ್ನೂ ಪ್ರಾರಂಭದಲ್ಲಿ ನಾವು ಇದ್ದೇವೆ. ಕಾರೀಫ್‌ಕ್ರಾಪ್ ಕೆಲವು ಕಡೆ ಹೋಗಿದೆ, ಇಲ್ಲವೆಂದು ಅಲ್ಲ. ವಿಶೇಷವಾಗಿ ನಮ್ಮ ಉತ್ತರ ಕರ್ನಾಟಕದಲ್ಲಿ ಕಾರೀಫ್‌ಕ್ರಾಪ್ ಮೇಲೆ ಅವಲಂಬಿಸಿದವರು ಇವತ್ತು ಬಹಳ ನಿರಾಶರಾಗಿದ್ದಾರೆ. ಇದಕ್ಕೆ ಏನು ಪರಿಹಾರ ಕಂಡುಹಿಡಿಯಬೇಕು. ಯಾವ ರೀತಿಯಾಗಿ ಸಹಾಯ ಮಾಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ಸಲಹೆ ಕೊಟ್ಟಿದ್ದರೆ ವಿಂಡಿತವಾಗಿಯೂ ಸರ್ಕಾರ ಅದನ್ನು ಪರಿಶೀಲನೆ ಮಾಡಿ ತನ್ನ ಇತಿಮಿತಿಯಲ್ಲಿ ಮತ್ತು ಇದೇರೀತಿಯಾಗಿ ಸಿ.ಆರ್ ಫಂಡ್‌ನ್ನು ಯಾವರೀತಿ ಉಪಯೋಗ ಮಾಡಬೇಕು, ಕೇಂದ್ರ ಸರ್ಕಾರದಿಂದ ಏನು ಕೇಳಬೇಕು, ಬೀಜದ ವ್ಯವಸ್ಥೆ ಏನು ಮಾಡಬೇಕು ಅಥವಾ ಮೇವಿನ ವ್ಯವಸ್ಥೆ ಏನು ಮಾಡಬೇಕು ಎಂದು ಬಗ್ಗೆ ಚಿಂತನೆಯನ್ನು ಮಾಡಬಹುದಾಗಿತ್ತು.

ಅದು ಯಾವ ಸಲಹೆಯನ್ನೂ ಕೊಡಲಿಲ್ಲ. ಸಾಲ ಮಾಫಿ ಮಾಡುತ್ತಿರೇನು? ಬಡ್ಡಿ ಮಾಫಿ ಮಾಡುತ್ತೀರೇನು? ಇದೇ ಇವರು ಕೇಳಿದ್ದು. ಇನ್ನೂ ಅನೇಕ ವ್ಯವಸ್ಥೆ ನಮ್ಮಲ್ಲಿ ಇದ್ದಾಗ, ಬೇರೆ ಬೇರೆ ರೀತಿಯಿಂದ ನಾವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎನ್ನತಕ್ಕಂಥಾದ್ದು ಯೋಚನೆ ಇದ್ದಾಗ ಅದರ ಬಗ್ಗೆ ಯಾವ ಸಲಹೆಯನ್ನೂ ಕೊಡದೆ ಸುಮ್ಮನೆ ವಿರೋಧ ಪಕ್ಷದಿಂದ ವಿರೋಧಿಸಬೇಕು ಎನ್ನತಕ್ಕಂಥ ಧೋರಣೆಯಿಂದ ಟೀಕೆ ಮಾಡಬೇಕು ಎನ್ನತಕ್ಕಂಥ ಧೋರಣೆಯಿಂದ ಮಾತ್ರ ಅವರು ಹೇಳಿದ್ದಾರೆಯೇ ಹೊರತಾಗಿ ಇದರಲ್ಲಿ ಏನೂ ಹುರುಳಿಲ್ಲ. ಇನ್‌ಶ್ಯೂರೆನ್ಸ್ ಕ್ಲೇಮ್‌ನ್ನು ನಾವು ಕೊಟ್ಟಿದ್ದೇವೆ. ಈ ತಿಂಗಳು ಎಂಟರಂದು ನಾವು ಹಣ ರಿಲೀಸ್ ಮಾಡಿದ್ದೇವೆ ಎಂದರೂ ಅದನ್ನು ಅವರು ಕೇಳಲಿಲ್ಲ. ಅದ್ಯಾವುದನ್ನೂ ಕೇಳದೆ ಹೊರಗೆ ಹೋದರು. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಹೇಳತಕ್ಕದ್ದು ಇಷ್ಟೆ. ಅವರ ಕೈಯಲ್ಲಿ ಅಧಿಕಾರ ಇದ್ದಾಗ ಅವರು ರೈತರ ಬಗ್ಗೆ ಚಿಂತನೆ ಮಾಡಲಿಲ್ಲ. ಆದರೆ ಇವತ್ತು ನಾವು ಅದಷ್ಟು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ. ರೈತರ ತೊಂದರೆಗೆ, ಅವರ ನೋವಿಗೆ ಸ್ಪಂದಿಸಬೇಕು ಎಂದು ಸರ್ಕಾರ ಸರ್ವಪ್ರಯತ್ನವನ್ನು ಮಾಡುತ್ತಿದೆ. ಆದರೆ ಅವರು ಇದನ್ನು ಸಹಿಸದೆ ಈ ರೀತಿಯಾಗಿ ಮಾತನಾಡುತ್ತಿದ್ದಾರೆ. ಇದಕ್ಕೆ ಏನೂ ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ಇಷ್ಟು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ): ಮಾನ್ಯ ಅಧ್ಯಕ್ಷರೇ, ಎರಡು ವಿಚಾರಗಳನ್ನು ನಾನು ಇಲ್ಲಿ ಹೇಳಬೇಕು. ಮೊದಲನೆಯದು, ತಮ್ಮ ಸೌಜನ್ಯವನ್ನು ಅವರು ದುರುಪಯೋಗಪಡಿಸಿಕೊಂಡಿದ್ದಾರೆ. ಮೂರು ದಿವಸಗಳ ಕಾಲ ನಡೆದ ಚರ್ಚೆಯಲ್ಲಿ ಮಾನ್ಯ ಖರ್ಗೆಯವರು ಹೇಳಿದ ಹಾಗೆ, ಏನೆಲ್ಲಾ ವಿಚಾರಗಳನ್ನು ಅವರು ಪ್ರಸ್ತಾಪ ಮಾಡಿದರು. ಸಾಧ್ಯವಾದಷ್ಟು ಸರ್ಕಾರ ಕಡೆಯಿಂದ ನಮಗೆ ಇರತಕ್ಕಂಥ ಮಾಹಿತಿಯನ್ನು ನಾವು ಒದಗಿಸಿದ್ದೇವೆ. ಆದರೆ ಈ ಸರ್ಕಾರದಲ್ಲಿ ಸಹಮತ ಇಲ್ಲ, ಈ ಸರ್ಕಾರದಲ್ಲಿ ದುಡ್ಡಿಲ್ಲ ಎಂದು ಹೇಳಿದರೆ ಇದಕ್ಕೆ ಈ ಪ್ರಶ್ನೆಗೆ ಸರ್ಕಾರ ಉತ್ತರ ಹೇಳಬೇಕು. ಅವರೇ ಪ್ರಿಸ್ಕ್ರೂಮ್ ಮಾಡಿ 1200 ಕೋಟಿ ರೂಪಾಯಿಗಳು ಕೊಡುವುದು ಬಾಕಿ ಇದೆ ಎಂದು ಹೇಳಿಬಿಟ್ಟು ಹೋಗಿಬಿಟ್ಟರೆ, ಅದು ದಾಖಲೆಯಲ್ಲೇ ಉಳಿಯುತ್ತದೆ. ಸರ್ಕಾರದಿಂದ ನಾವು ಇದಕ್ಕೆ ಏನು ಉತ್ತರ ಹೇಳಬೇಕೋ ಅದನ್ನು ಹೇಳದೇ ಇದ್ದರೆ ದಾಖಲೆಯಲ್ಲಿ ಅದು ಉಳಿಯುತ್ತದೆ. ಪತ್ರಿಕೆಗಳಲ್ಲಿ ಕೂಡ ಇದು ವರದಿಯಾಗುತ್ತದೆ. ಆದ್ದರಿಂದ ಇದೇನೆಂದರೆ ಬರ ಪರಿಹಾರ ನೆಪದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಮೇಲೆ ಸಾಕಷ್ಟು ಬೆಳಕನ್ನು ಚೆಲ್ಲುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈ ದಿವಸ ಬೆಳಿಗ್ಗೆ ಬಹಳ ಕನ್ಸಿಡರ್ಡ್ ಆಗಿ ತಮ್ಮ ವ್ಯೂಹವನ್ನು ಹೇಳಿದ್ದಾರೆ. ಈ ಪ್ರಚಾರಗಳಿಗೆಲ್ಲಾ ಮುಂದಿನ ವಾರ ತಾವು ಉತ್ತರ ಕೊಡುವುದಾಗಿ ಅವರು ಹೇಳಿದ್ದಾರೆ. ಆದ್ದರಿಂದ ಅವರಿಂದ ಉತ್ತರ ಬರುವವರೆಗೆ ಕಾಯುವ ಸೌಜನ್ಯವೂ ಅವರಿಗೆ ಇಲ್ಲ. ಮಾನ್ಯ ಖರ್ಗೆಯವರು ಹೇಳಿದ ಹಾಗೆ ಯಾವ ಕಾಲಕ್ಕೂ ಮಾಡದೇ ಇರುವಷ್ಟು ಪರಿಹಾರವನ್ನು ಈಗ ನಾವು ರೈತರಿಗೆ ಒದಗಿಸಿದ್ದೇವೆ. ಇದು ಒಂದು ಭಾಗ. ಕಂದಾಯ ಮಂತ್ರಿಗಳು ಹೇಳಿದ ಹಾಗೆ ಪೂರ್ವಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಬರ ಬಾರದಿರಲಿ ಎಂದು ಪ್ರಾರ್ಥನೆ ಮಾಡೋಣ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಈಗ ಕಾವೇರಿ ಮತ್ತು ಬೇರೆಬೇರೆ ನದಿಗಳಿಗೆ ಒಳಹರಿವು ಬರುತ್ತಿದೆ.

ಸ್ವಲ್ಪಮಟ್ಟಿಗೆ ಮಳೆ ಬರಬಹುದು ಎಂದು ಆಸೆ ಇದೆ. ನಿನ್ನೆ ಸಾಯಂಕಾಲದಿಂದ ನಮ್ಮ ಕಡೆ ಆಗಿರುವ ಮಳೆಯಿಂದ ಈ ಭಾವನೆ ಬಂದಿದೆ.

ಅಧ್ಯಕ್ಷರು: ಮಳೆ ಪ್ರಾರಂಭವಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ: ನಾನು ಚರ್ಚೆ ಆರಂಭವಾಗುವುದಕ್ಕೆ ಮುಂಚೆಯೇ ಹೇಳಿದ್ದೆ. ಇದನ್ನು ಕೊನೆಗೆ ಶಾಸನಸಭೆ ಮುಗಿಯುವುದಕ್ಕೆ ಮುನ್ನ ಚರ್ಚೆ ಮಾಡೋಣ, ಆಗ ಸಾಕಷ್ಟು ಮಾಹಿತಿ ಇರುತ್ತದೆ ಎಂದು ಹೇಳಿದ್ದೆ. ಆದರೂ ಚರ್ಚೆ ಮಾಡಿದ್ದಾರೆ. ಆದರೆ ಈ ಸರ್ಕಾರ ಮಾಡಿರತಕ್ಕಂಥ ಕೆಲಸದ ಬಗ್ಗೆ ಮೆಚ್ಚುಗೆ ಬೇಡ, ಅಥವಾ ಅವರಿಗೆ ಕ್ರೆಡಿಟ್ ಕೊಡುವುದಕ್ಕೆ ಇಚ್ಛೆಯಿಲ್ಲದಿದ್ದರೆ ಪರವಾಗಿಲ್ಲ. ಆದರೆ ಅವರು ಹೇಳಿದ್ದಷ್ಟೇ ಕಡತಕ್ಕೆ ಹೋಗಿ ಸರ್ಕಾರದಿಂದ ಉತ್ತರ ಬರಲಿಲ್ಲ ಎನ್ನತಕ್ಕಂಥ ಲೋಪ ಇರಬಾರದು ಎನ್ನತಕ್ಕಂಥ ದೃಷ್ಟಿಯಿಂದ ಈ ಸರ್ಕಾರದಲ್ಲಿ ಯಾವ ಭಿನ್ನಮತವೂ ಇಲ್ಲ, ನಾವು ಎಲ್ಲರ ಒಗ್ಗಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ಮುಂದೆಯೂ ಹೀಗೆ ಕೆಲಸ ಮಾಡುತ್ತೇವೆ. ರಾಜಕೀಯ ದೃಷ್ಟಿಯಿಂದ ಅವರು ಏನು ಪ್ರಸ್ತಾಪ ಮಾಡಿದ್ದಾರೆ ಅವೆಲ್ಲವೂ ಆಧಾರರಹಿತ. ಇದು ಕಡತದಲ್ಲಿ ಇರಲಿ ಎನ್ನುವ ಕಾರಣಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಈಗ ಬರ ಮತ್ತು ಬೆಳೆ ವಿಮೆ ವಿಷಯದ ಬಗ್ಗೆ ಚರ್ಚೆ ಮುಗಿಯಿತು. ಇನ್ನು ವತ್ತೀಯ ಕಾರ್ಯಕಲಾಪಗಳನ್ನು ನಾವು ಪ್ರಾರಂಭ ಮಾಡಬೇಕು.

ಶ್ರೀ ಎಲ್. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):- ಒಂದು ನಿಮಿಷ. ನಾನು ಇಲ್ಲದೇ ಇದ್ದಾಗ ಸದನದಲ್ಲಿ ಮಾನ್ಯ ಕರಡಿ ಸಂಗಣ್ಣನವರು ಶೂನ್ಯವೇಳೆಯಲ್ಲಿ ಕೊಪ್ಪಳದ ಪ್ರಕರಣದ ಬಗ್ಗೆ ಹೇಳಿದ್ದಾರೆ.

ಅಧ್ಯಕ್ಷರು: ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮುಖ್ಯಮಂತ್ರಿಗಳು ಉತ್ತರ ಹೇಳಿದ್ದಾರೆ.....

ಅಧ್ಯಕ್ಷರು: ತಾವು ಏನಾದರೂ ಎಕ್ಸ್‌ಟ್ರಾ ಹೇಳುವುದು ಇದ್ದರೆ ಹೇಳಿ. ಮುಖ್ಯಮಂತ್ರಿಗಳು ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ.

(ಊ) ಕೊಪ್ಪಳದ ಘಟನೆಯ ಬಗ್ಗೆ ಮಾನ್ಯ ಗೃಹಸಚಿವರಿಂದ ಉತ್ತರ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಎಕ್ಸ್‌ಟ್ರಾ ಹೇಳುವುದು ಏನು ಇಲ್ಲ. ಆದರೆ ಅಲ್ಲಿ ನಡೆದಂಥ ಘಟನೆ ಬಗ್ಗೆ ನನ್ನ ಹೇಳಿಕೆಯನ್ನು ಸುಮ್ಮನೆ ಓದಿ ಹೇಳುತ್ತೇನೆ. ತಮ್ಮ ಗಮನಕ್ಕೆ ಇದು ಬರಲಿ ಅಂತ ಹೇಳುತ್ತೆನೆ.

ದಿನಾಂಕ 9.7.2001ರಂದು ಬೆಳಿಗ್ಗೆ 6-30 ಗಂಟೆಗೆ ಕೊಪ್ಪಳ ಶಹರ ಪೋಲೀಸ್ ಠಾಣೆಯಿಂದ ದೂರವಾಣಿ ಕರೆಬಂದಿದ್ದು ಅದರಂತೆ ರಾತ್ರಿ ಡಾ।। ಬಿ.ಆರ್. ಅಂಬೇಡ್ಕರ್ ಮೂರ್ತಿಗೆ ಹಸಿರು ಬಣ್ಣದ ಟೋಪಿಯನ್ನು ತೊಡಿಸಿದ್ದು, ಇದನ್ನು ಪ್ರತಿಭಟಿಸಿ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಡಾ।। ಬಿ.ಆರ್. ಅಂಬೇಡ್ಕರ್ ಪ್ರತಿಮೆ ಎಂದೆ ಜಮಾಯಿಸಿದ್ದಾರೆ ಎಂದು ತಿಳಿಸಿದ್ದರ ಮೇರೆಗೆ ಸಿ.ಪಿ.ಐ. ಕೊಪ್ಪಳ (ಗ್ರಾಮಾಂತರ) ಅವರು ಕೂಡಲೇ ಸ್ಥಳಕ್ಕೆ